ದೇವಿರಾಮಂದಿರ

ಚನ್ನಗಿರಿ

# ಮಧುರಯಾನ

(ಕವನಸಂಕಲನ)

ಕ. ಮ. ಶಿ. ಚಂದ್ರಶೇಖರಯ್ಯ

ನೇಹದ ನುಡಿ

ಶ್ರೀ ಚೆನ್ನವೀರ ಕಣವಿ



ದೇವಿರಾಮಂದಿರ
ಚನ್ನಗಿರಿ

ಪ್ರಕಾಶನ
ದೇವಿರಾಮಂದಿರ
ಚನ್ನಗಿರಿ
ಶಿವಮೊಗ್ಗ ಜಿಲ್ಲೆ



ಸಂಪಾದಕ
ಎಸ್. ಪಂಚಾಕ್ಷರಿ



ಬೆಲೆ: ಸಾದಾ ಪ್ರತಿ ೭೫ ನಯೆಪೈಸೆ
ಕ್ಯಾಲಿಕೊ ಪ್ರತಿ ೧—೨೫ ನಯೆಪೈಸೆ

ಮುದ್ರಕರು
ಚೇತನ ಮುದ್ರಾಲಯ
ರಮಾವಿಲಾಸ ಅಗ್ರಹಾರ, ಮೈಸೂರು

# ಅ ರ್ಪ ಣೆ

ಹಡೆದೊಡಲ ನೆನಹಿಗೆ—

—ಕೆ. ಮ. ಶಿ. ಚಂದ್ರಶೇಖರಯ್ಯ.

# ಪರಿವಿಡಿ

## ಒಪ್ಪೋಲೆ

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| ೬ | ೫ | ಕಾಣದೆಲೆ | ಕಾಣದಲೆ |
| ೭ | ೫ | ತೋರುತಿರ | ತೋರುತಿಹ |
| ೧೦ | ೧೭ | ನಾವು | ಸಾವು |
| ೧೪ | ೭ | ನುಗುತಲಿ | ನಗುತಲಿ |
| ೧೫ | ೪ | ಬರೆಯಿರಿ ? | ಬರೆಯರಿ ? |
| ೨೪ | ೧೦ | ಸ್ತಿಗ್ಧ | ಸ್ನಿಗ್ಧ |
| ೨೭ | ೧೪ | ಜಾತಶ್ಯ | ಜಾತಸ್ಯ |
| ೩೫ | ೧೭ | ಒಣಗಿದರೆ | ಒಣಗದಿರೆ |
| ೩೮ | ೧ | ವರ್ಗ, | ವರ್ಣ, |
| ೩೮ | ೩ | ಬರುವ | ಬರಲಿರುವ |
| ೪೪ | ೫ | ಆದಕಾವುತಿ | ಆದಕಾಯಿತು |
| ೪೮ | ೨೧ | ಕುಳಿತ | ಕುಣಿತ |
| ೫೦ | ೪ | ಹಸುಗಳಿಗನಸಿನ | ಹಸುಳೆಗನಸಿನ |
| ೫೦ | ೫ | ಶಿಶಿರ | ಶಶಿಯ |

# ಪ್ರಕಾಶನದ ಪರವಾಗಿ

ಕಳೆದ ವರ್ಷ–ನನ್ನ ಮನೆಗೆ ನೀ ಚಂದ–ಕಥಾಸಂಕಲನವನ್ನು ಪ್ರಕಟಿಸಿದ ನಾವು, ಈ ವರ್ಷ–ಮಧುರ ಯಾನ–ಕವನ ಸಂಕಲನವನ್ನು ಪ್ರಕಟಿಸುವ ಸಾಹಸ ಮಾಡಿದ್ದೇವೆ.

'ಮಧುರ ಯಾನ'ದ ಕವಿ ಶ್ರೀ ಕ. ಮ. ಶಿ. ಚಂದ್ರಶೇಖರಯ್ಯನವರು, ನಮ್ಮ ಊರಿನವರಾದ್ದರಿಂದಲೂ, ಮುಖ್ಯವಾಗಿ ನಮ್ಮ ಪರಮ ಮಿತ್ರರಾದ್ದರಿಂದಲೂ, ಅವರ ಮೊದಲ ಕವನ ಸಂಕಲನವನ್ನು ಪ್ರಸಿದ್ಧ ತರುಣ ಕವಿಗಳಾದ ಶ್ರೀ ಚನ್ನವೀರ ಕಣವಿಯವರ 'ನೇಹದ ನುಡಿ' ಯೊಂದಿಗೆ ಪ್ರಕಟಿಸಲು ವೈಯಕ್ತಿಕವಾಗಿ ನಮಗೆ ತುಂಬಾ ಸಂತೋಷವಾಗಿದೆ.

ಶ್ರೀ ಕ. ಮ. ಶಿ. ಚಂದ್ರಶೇಖರಯ್ಯನವರು, ಸುಮಾರು ೧೯೫೦ ನೇ ವರ್ಷದಿಂದ ಕವನಗಳನ್ನು ಬರೆಯುತ್ತಿದ್ದಾರೆ. ಅವರ ಅನೇಕ ಕವಿತೆಗಳು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಈಗಾಗಲೇ ಪ್ರಕಟವಾಗಿವೆ. ಇಷ್ಟಾದರೂ, ಅವರ ಕವನ ಸಂಕಲನವೊಂದು ಇದುವರೆಗೂ ಪ್ರಕಟವಾಗಿರಲಿಲ್ಲ! ಬಹುಶಃ, ಹೊಸ ಬರೆಹಗಾರರ ಪಾಡೇ ಹೀಗೆಂದು ತೋರುತ್ತದೆ. ಈ ಮಾತು, ಹೊಸ ಕಾದಂಬರಿಕಾರರಿಗೆ, ಈಗಿನ ಸಂದರ್ಭದಲ್ಲಿ ಅನ್ವಯಿಸುವುದಿಲ್ಲ!

—ಈ ವಿಷಯ ಹೇಗಾದರೂ ಇರಲಿ, ನಮ್ಮ ಕ್ಷೇತ್ರದ ಕವಿಯೊಬ್ಬನ ಪ್ರಥಮ ಕವನ ಸಂಕಲನವನ್ನು, ನಾವೇ ಪ್ರಕಟಿಸುವ ಅವಕಾಶ ದೊರೆತಿರುವುದು, ಅಭಿಮಾನದ ವಿಷಯ.

ಸುಮಾರು ಒಂದು ದಶಕದಿಂದ ಕನ್ನಡ ಕಾವ್ಯರಂಗದಲ್ಲಿ ವಿವಿಧ ರೀತಿಯ ನೂತನ ಪ್ರಯೋಗಗಳು ನಡೆಯುತ್ತಲೇ ಇವೆ. ಹೀಗಾಗಿ, 'ರೊಮ್ಯಾಂಟಿಕ್' ಸಂಪ್ರದಾಯದಲ್ಲಿ ದೀರ್ಘಕಾಲ ನೆಲೆಯಾಗಿ ನಿಂತಿದ್ದ ಆಧುನಿಕ ಕನ್ನಡ ಕಾವ್ಯಮಾರ್ಗ ದಿಕ್ಕು ತಪ್ಪಿದಂತಾಗಿದೆ. ಪ್ರತಿಭಾವಂತ ಕವಿಗಳ ಸತತ ಶ್ರಮದಿಂದ, ಪುನಃ ಯಾವುದಾದರೂ ಒಂದು ಸಂಪ್ರದಾಯ ನೆಲೆಯಾಗಿ ನಿಲ್ಲಬಹುದು.

....ಈ ಪ್ರಯೋಗ ಯುಗದಲ್ಲಿ ಕಾವ್ಯರಚನೆಗೆ ಕೈಯಿಕ್ಕಿದ ಹೊಸ ಬರೆಹಗಾರರೆಲ್ಲರಲ್ಲಿಯೂ ಸಂಪೂರ್ಣ ಸಿದ್ಧಿಯನ್ನು ಅರಸುವುದು ಅರ್ಥವಿಲ್ಲದ ಮಾತು. ಏಕೆಂದರೆ, ವಿವಿಧ ಪ್ರಯೋಗಗಳ ಪ್ರಭಾವಕ್ಕೆ ಒಳಗಾಗಿ, ಪ್ರಥಮದಲ್ಲಿ ನಿರ್ಧಿಷ್ಟಮಾರ್ಗ ದೊರಕದೆ ತಡಕಾಡುವುದು ಸ್ವಾಭಾವಿಕ.

—ಈ ಮಾತು, ಶ್ರೀ ಚಂದ್ರಶೇಖರಯ್ಯನವರಿಗೂ ಅನ್ವಯಿಸುತ್ತದೆ.

ಶ್ರೀ ಚಂದ್ರಶೇಖರಯ್ಯನವರ ಈ ಕೃತಿಯ—ಮಧುರಯಾನದ—ಹೆಚ್ಚುಗಾರಿಕೆ ಬೇರೆ ಬೇರೆ ರೀತಿಯಲ್ಲಿ, ಬೇರೆ ಬೇರೆಯವರಿಗೆ ವ್ಯಕ್ತವಾಗಬಹುದು. ಆದರೆ, ಎಲ್ಲ ರೀತಿಯ ಪ್ರಯೋಗಗಳ ಪ್ರಭಾವಕ್ಕೆ ಒಳಗಾಗಿರುವುದರಲ್ಲಿಯೇ ಒಂದು ರೀತಿಯ ಹೆಚ್ಚುಗಾರಿಕೆ ಈ ಕೃತಿಗಿದೆ—ಎಂಬುದನ್ನು ಮಾತ್ರ ನಾವು ಸೂಚಿಸ ಬಯಸುತ್ತೇವೆ.

ಈ ಗುಣವುಳ್ಳ ಕವಿ ಬಹುಬೇಗ ತನ್ನದೇ ಆದ ಮಾರ್ಗವನ್ನು ಕಂಡುಕೊಂಡು ಮುನ್ನಡೆಯುತ್ತಾನೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಶ್ರೀ ಚಂದ್ರಶೇಖರಯ್ಯನವರು ತಮ್ಮ ಮಾರ್ಗದಲ್ಲಿ ಮುನ್ನಡೆದು, ಯಶಸ್ಸನ್ನು ಪಡೆಯಲಿ ಎಂಬುದೇ ನಮ್ಮ ಬಯಕೆ.

...........ಅವರ ಈ ಕೃತಿಯನ್ನು ಕಾವ್ಯಪ್ರೇಮಿಗಳು, ಆದರದಿಂದ ಸ್ವಾಗತಿಸುತ್ತಾರೆಂದು ನಾವು ಆಶಿಸುತ್ತೇವೆ.

೨೪ ಜೂನ್ ೧೯೫೭

ದೇವಿರಾಮಂದಿರ

ಚನ್ನಗಿರಿ

ಎಸ್. ಪಂಚಾಕ್ಷರಿ.

# ಕಾವ್ಯ ಪ್ರೇಮಿಗಳಲ್ಲಿ

ಪ್ರಿಯ ಓದುಗ,

'ಮಧುರಯಾನ' ನನ್ನ ಮೊದಲ ಕವನ ಸಂಕಲನ. ಕಳೆದ ಆರೇಳು ವರ್ಷಗಳಿಂದ ಕನ್ನಡದ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಕೆಲವು ಕವನಗಳನ್ನು ಇಲ್ಲಿ ಸಂಕಲಿಸಿ ನಿನ್ನ ಅವಲೋಕನೆಗಾಗಿ ಮುಂದಿರಿಸಿದ್ದೇನೆ.

ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಆಧುನಿಕ ಕನ್ನಡ ಕಾವ್ಯದ ಬೆಳವಣಿಗೆಯನ್ನು ಕುತೂಹಲದಿಂದ ನೋಡುತ್ತಾ ಬಂದಿದ್ದೇನೆ. ಅಲ್ಲಿ ನಡೆಯುತ್ತಿರುವ ನವ್ಯ ಪ್ರಯೋಗಗಳನ್ನು ಆಸಕ್ತಿಯಿಂದ ಅಭ್ಯಸಿಸುತ್ತಾ ಬಂದಿದ್ದೇನೆ; ಇವುಗಳ ಪರಿಣಾಮ ನನ್ನ ಈ 'ಮಧುರಯಾನ'.

ದಿನ ಬೆಳಗಾದರೆ ಕನ್ನಡದಲ್ಲಿ ಹತ್ತಾರು ಸುಲಭ ಬೆಲೆಯ ಮೋಹಕ ಕಾದಂಬರಿಗಳು ಹೊರಬೀಳುತ್ತಿರುವ ಈ ಕಾಲದಲ್ಲಿ, ಕವಿತೆಗಳನ್ನು ಅಭ್ಯಸಿಸುವ ಪ್ರಶ್ನೆ ಹಾಗಿರಲಿ, ಅವುಗಳ ಬಗ್ಗೆ ಸ್ವಲ್ಪ ಅಭಿಮಾನವನ್ನಾದರೂ ತಾಳುವ ಮನೋಭಾವ ಕನ್ನಡ ಓದುಗನಲ್ಲಿ ಕಾಣದಿರುವುದು ನಮ್ಮೆಲ್ಲರ ದೌರ್ಭಾಗ್ಯ. ಇಂಥ ಪರಿಸ್ಥಿತಿಯಲ್ಲಿ ಹೊಸಬನೊಬ್ಬನ ಕವನವೆಂದರೆ ಇನ್ನು ಹೇಳಬೇಕಾದ್ದೇನಿದೆ?

ಇಲ್ಲಿರುವ ಕವನಗಳನ್ನು ಅವಲೋಕಿಸುವಮುನ್ನ, ನನ್ನ ಈ ಕೆಳಗಿನ ಒಂದೆರಡು ಅಭಿಪ್ರಾಯಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಇಲ್ಲಿನ ನನ್ನ ಕವನಗಳನ್ನು ಯಾವ ರೀತಿಯಿಂದಲಾದರೂ ವಿಮರ್ಶಿಸು. ಆಗ ನಿನ್ನಅಮೂಲ್ಯ ಅಭಿಪ್ರಾಯ, ಸಲಹೆಗಳನ್ನುತೆರೆದ ಮನಸ್ಸಿನಿಂದ ಸ್ವಾಗತಿಸುತ್ತೇನೆ.

ಇಲ್ಲಿರುವ ಕವನಗಳಲ್ಲಿ ಎಲ್ಲವೂ ಪ್ರಬುದ್ಧ ಭಾವಗಳ ನವ್ಯಪ್ರಯೋಗಗಳಲ್ಲ! ಅಥವಾ ಹಲವು ವರ್ಷಗಳ ಅನಂತ ತಪಸ್ಸಿನ ಅಗ್ನಿಕುಂಡದಲ್ಲಿ ಮೂಡಿಬಂದ ರನ್ನ ಮಣಿಗಳಲ್ಲ!! ಕನ್ನಡ ಕಾವ್ಯಲೋಕದ ಪರಿಚಯಕ್ಕೆ ಪ್ರಥಮ ಹಂತವಾಗಿ ಪ್ರಯತ್ನಿಸಿದ ತರುಣನೊಬ್ಬನ ತೊದಲ್ನುಡಿಗಳು; ಕನ್ನಡ ಕಾವ್ಯಶ್ರೀಯ ಭವ್ಯಪರಂಪರೆಗೆ ಬೆರಗಾದ ಕನ್ನಡ ಯುವಕನೊಬ್ಬನ ಅಭಿಮಾನದಲ್ಲಿ ಮೂಡಿಬಂದ ಕಿರುನುಡಿಗಳು.

ಇಷ್ಟನ್ನು ನಿನ್ನ ಸಹೃದಯಕ್ಕೆ ತಂದುಕೊಂಡು 'ಮಧುರಯಾನ'ವನ್ನು ಅವಲೋಕಿಸು.

ಇಲ್ಲಿನ ಕವನಗಳಲ್ಲಿ ಕೆಲವು ವೈಯಕ್ತಿಕ ಜೀವನಕ್ಕೆ ಸಂಬಂಧಪಟ್ಟವು ಇವೆ; ಇನ್ನೂ ಕೆಲವು ನಮ್ಮ ನಾಡು, ನುಡಿಯ ಬಗ್ಗೆ ಬರೆದವು ಇವೆ. ಇವೆಲ್ಲವೂ ಸಂದರ್ಭೋಚಿತವಾಗಿ ಬರೆದವು.

ಕಳೆದ ಮೂರು ವರ್ಷಗಳಿಂದ ಸತತ ಪ್ರಚಾರದಲ್ಲಿರುವ ಕನ್ನಡ ನವ್ಯ ಕವಿತೆಯ ಪರಿಚಯ, ಕಾವ್ಯ ಪ್ರೇಮಿಯಾದ ನಿನಗೆ ಸಾಕಷ್ಟು ಆಗಿರಲೇ ಬೇಕು. ಆ ದಿಕ್ಕಿನಲ್ಲಿ ಸಾಗಿಬಂದ ನನ್ನ ಅಲ್ಪ ಪ್ರಯತ್ನ ಇಲ್ಲಿರುವ 'ಅನಂತರ' 'ಸೋತಮನ' 'ಸುಪ್ತಶಕ್ತಿ' 'ದೀಪಾವಳಿ' ಹಾಗೂ 'ಅವಳ ಕುಣಿತ ನೋಡಿ'...............ಈಗಾಗಲೇ ಪ್ರಕಟವಾಗಿರುವ ಉದ್ದಾಮ ಕನ್ನಡಕವಿಗಳ ನವ್ಯ ಕವಿತೆಗಳ ಬಗ್ಗೆಯೇ ಸಾಕಷ್ಟು ಚರ್ಚೆ ನಡೆದಿರುವಾಗ ನನ್ನ ಈ ಕವಿತೆಗಳ ಬಗ್ಗೆ ಸಹೃದಯ ವಿಮರ್ಶಕನಾದ ನೀನು ಅವುಗಳ ಯಶಸ್ಸು, ಸಾಫಲ್ಯದ ಬಗ್ಗೆ ತೀರ್ಪು ನೀಡಬೇಕಾಗಿದೆ.

ಕೊನೆಯದಾಗಿ 'ಮಧುರಯಾನ'ದ ಇಂದಿನ ರೂಪಕ್ಕೆ ಕಾರಣರಾದ ಹಲವು ಸ್ನೇಹಿತರನ್ನು ನೆನೆಯುವುದು ನನ್ನ ಆದ್ಯ ಕರ್ತವ್ಯವಾಗಿದೆ..........

ಕನ್ನಡದ ಪ್ರಮುಖ ಕಾದಂಬರಿಕಾರರಾದ ಶ್ರೀ ನಿರಂಜನ, ಕೃಷ್ಣ ರಾಜನಗರದ ಗೆಳೆಯ ಶ್ರೀ ಸಿದ್ಧವೀರಶೆಟ್ಟಿ ಬಿ.ಎ, ಬಿ.ಕಾಮ್, ಇವರುಗಳು ಮೊದಲಿನಿಂದಲೂ ನನ್ನ ಕವನಗಳ ಬಗ್ಗೆ ಅಸ್ಥೆ, ಅಭಿಮಾನ ತೋರಿ ಪ್ರೋತ್ಸಾಹಿಸಿದ್ದಾರೆ.

ಇಂದಿನ ಕನ್ನಡ ತರುಣ ಕವಿಗಳಲ್ಲಿ ಪ್ರಮುಖರಾದ ಶ್ರೀ ಚನ್ನವೀರ ಕಣವಿಯವರು ನನ್ನ ಕವನಗಳನ್ನು ಮೊದಲು ಓದಿ 'ನೇಹದ ನುಡಿ'ಯ ಹರಕೆ ಇತ್ತಿದ್ದಾರೆ.

ಸಂಕಲನದ ಸುಂದರ ಮುದ್ರಣಕ್ಕೆ ಚೇತನ ಮುದ್ರಣಾಲಯದ ಶ್ರೀ ನ. ಕೃಷ್ಣ ಅವರು ಶ್ರಮಿಸಿದ್ದಾರೆ. ಅಚ್ಚಿನ ಕರಡನ್ನು ಗೆಳೆಯ ಶ್ರೀ ಜಯದೇವ ಅವರು ತಿದ್ದಿದ್ದಾರೆ.

ಇಲ್ಲಿರುವ ಕವನಗಳೆಲ್ಲವನ್ನೂ, ಪ್ರಜಾವಾಣಿ, ಚಿತ್ರಗುಪ್ತ, ಜನಪ್ರಗತಿ, ರಾಮರಾಜ್ಯ—ಪತ್ರಿಕೆಗಳ ಸಂಪಾದಕರು ಪ್ರಕಟಿಸಿ ಪ್ರೋತ್ಸಾಹಿಸಿದ್ದಾರೆ.

ಈ ನನ್ನ ಮೊದಲ ಕವನ ಸಂಕಲವನ್ನು ಪ್ರಕಟಿಸಲು ಧೈರ್ಯಮಾಡಿದ್ದಾರೆ, ಗೆಳೆಯ ಶ್ರೀ ಪಂಚ ಅವರು.

ಇವರೆಲ್ಲರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಹೇವಿಳಂಬಿ, ವೈಶಾಖ

ಬುದ್ಧ ಪೂರ್ಣಿಮಾ. **ಕೆ. ಮ. ಶಿ. ಚಂದ್ರಶೇಖರಯ್ಯ.**

ಉಮಾಮಹೇಶ್ವರ ನಿಲಯ, ಚಿತ್ರದುರ್ಗ.

# ನೇಹದ ನುಡಿ

ಗೆಳೆಯ ಪಂಚಾಕ್ಷರಿಯವರು ತಮ್ಮ ಸ್ನೇಹಿತರಾದ ಶ್ರೀ ಕ. ಮ. ಶಿ. ಚಂದ್ರಶೇಖರಯ್ಯನವರ ಕವನ ಸಂಗ್ರಹಕ್ಕೆ ಮುನ್ನುಡಿಯರೂಪದಲ್ಲಿ ನಾಲ್ಕು ಮಾತುಗಳನ್ನು ಬರೆಯಬೇಕೆಂದು ಈಗ ಕೆಲದಿನಗಳ ಹಿಂದೆ ಕೇಳಿಕೊಂಡಿದ್ದರು. ನಾನವರಿಗೆ, "ಮುನ್ನುಡಿಯೆಂದೇ ಏಕೆ, ಕವಿತೆಗಳನ್ನೋದಿದ ಮೇಲೆ ನನ್ನ ಅಭಿಪ್ರಾಯವನ್ನು ಅವರಿಗೆ ಅಗತ್ಯವಾಗಿ ಪತ್ರರೂಪದಲ್ಲಿ ತಿಳಿಸುತ್ತೇನೆ" ಎಂದಿದ್ದೆ. ಕವನ ಸಂಗ್ರಹದ ಕರಡು ಪ್ರತಿಯನ್ನು ಈಗಲೇ ಕಳುಹಿಸಿ ಅವರು ಮತ್ತೆ ಅದನ್ನು ನನ್ನ ನೆನಪಿಗೆ ತಂದುಕೊಟ್ಟಿದ್ದಾರೆ. ಅದನ್ನೋದಿದ ತರುವಾಯ ನನ್ನ ಎರಡು ನೇಹದ ನುಡಿಗಳನ್ನು ಇಲ್ಲಿ ಮೂಡಿಸುತ್ತಿದ್ದೇನೆ.

ಶ್ರೀ ಚಂದ್ರಶೇಖರಯ್ಯನವರನ್ನು ನಾನು ಮುಖತಃ ಕಂಡಿಲ್ಲವಾದರೂ ಅವರ ಕವನಗಳನ್ನು ಆಗೀಗ ಪತ್ರಿಕೆಗಳಲ್ಲಿ ಅವಲೋಕಿಸಿದ್ದೇನೆ. "ನಿಮ್ಮ ಮುಖಪರಿಚಯು ನನಗಿಲ್ಲದಿದ್ದರೂ ಬಹುಕಾಲದಿಂದಲೂ ನಿಮ್ಮ ಕಾವ್ಯ ಪರಿಚಯು ನನಗಿದೆ. ವೈಯಕ್ತಿಕ ಪರಿಚಯವಿಲ್ಲದಿದ್ದರೂ ದೊಡ್ಡಮನಸ್ಸು ಮಾಡಿ ಕವನ ಸಂಕಲನಕ್ಕೆ ಮುನ್ನುಡಿಯನ್ನು ಬರೆಯಲು ಒಪ್ಪಿದುದು ತಮ್ಮ ಸಹೃದಯಕ್ಕೆ ಸಾಕ್ಷಿಯಾಗಿದೆ" ಎಂಬುದಾಗಿ ಅವರು ತಮ್ಮ ಓಲೆಯಲ್ಲಿ ಕಾಣಿಸಿದ್ದಾರೆ. ಬರಿಯ ಕಾವ್ಯ ಪರಿಚಯಮಾತ್ರದಿಂದ ಅವರು ತಮ್ಮ ಅಂತಃಕರಣವನ್ನು ನನ್ನೆದುರು ತೆರೆದು ತೋರಿಸುತ್ತಿರುವುದನ್ನು ನೋಡಿದರೆ, 'ದೊಡ್ಡಮನಸ್ಸು,' 'ಸಹೃದಯ' ಎಂಬ ಮಾತುಗಳು ನಿಜವಾಗಿಯೂ ಅವರಿಗೇ ಅನ್ವಯಿಸುತ್ತವೆಂಬುದನ್ನು ನಾನಿಲ್ಲಿ ಹೇಳದಿರಲಾರೆ.

ಇಲ್ಲಿರುವ ಕವನಗಳನ್ನು ಕುರಿತು ಪ್ರಸ್ತಾಪಿಸುತ್ತ ಅವರು ಅದೇ ಕಾಗದದಲ್ಲಿ "ಕಳೆದ ಆರೇಳು ವರ್ಷಗಳಿಂದ ಬೆಂಗಳೂರಿನಲ್ಲಿ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಬರೆಯುತ್ತಿದ್ದ, ಕನ್ನಡದ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ, ಕೆಲವು ಕವನಗಳನ್ನು ಇಲ್ಲಿ

ಸಂಕಲಿಸಿದ್ದೇನೆ" ಎಂದಿದ್ದಾರೆ; "ಹೊಸಬನೊಬ್ಬನ ಕವನಗಳು, ತಪ್ಪುಗಳನ್ನು ತೋರಿಸಿದರೆ ತಿದ್ದಿಕೊಳ್ಳುತ್ತೇನೆ" ಎಂಬ ವಿನಯವನ್ನೂ ಅವರು ವ್ಯಕ್ತಪಡಿಸಿದ್ದಾರೆ.

(೨)

ಈ ಸಂಗ್ರಹದ ಅನೇಕ ಕವಿತೆಗಳಲ್ಲಿ ಕವಿಯ ಮುಗ್ಧಮನೋಭಾವ ಮಧುರಕಲ್ಪನೆಯೊಡನೆ ವ್ಯಕ್ತಗೊಂಡಿರುವುದನ್ನು ಕಾಣುತ್ತೇವೆ. 'ಮಧುರಯಾನ'ದಲ್ಲಿ ಸೂತ್ರರೂಪವಾಗಿ ಅದು ಪ್ರಕಟಗೊಂಡಿದೆ:

"ಹಸುಳೆಗನಸಿನ ಶಶಿಯ ಲೋಕಕೆ ನಮ್ಮ ಬಯಕೆಯ ಪಯಣವು
ಮಳೆಯಬಿಲ್ಲಿನ ಸಿರಿಯಚೆಲುವಿಗೆ ಮನವೆ ಸೋತಿದೆ—ಮೌನವು!
ಮಧುರಭಾವದ ದಿವ್ಯರೂಪದ ಪ್ರೀತಿಪ್ರೇಮದ ಸ್ರೋತವು
ನೂರು ವರ್ಣದ ನೂರು ರಾಗದ ಮಧುರಯಾನದ ಬಯಕೆಯು."

ಕಾವ್ಯರಚನೆಗೆ ತೊಡಗುವ ಪ್ರಥಮದಲ್ಲಿ ಕವಿಗೆ ಇಂಥ ಭಾವ ಸಹಜವಾದದ್ದು. ಕಾವ್ಯಜೀವನದ ಈ ಮೊಗ್ಗು "ಅರಳಿ ಸೌರಭವೀವ ಸಂತಸಕೆ ಕಾದಿಹುದು," ಅಲ್ಲದೆ "ಜನರ ಮನವನು ಸೆಳೆವ ಮರುಳಾಟ ಇದಕಿಹುದು."

ತಾಯನ್ನು ಸೆಳೆದುಕೊಂಡ ಕ್ರೂರಮೃತ್ಯು ಮಮತೆ ಮೋಹದ ಮಧುರ ಬಂಧನವನ್ನು ಕಡಿದುದರ ಕೊರಗು ಬೀಸುಗಲ್ಲಿನ ಹಾಡುಕೇಳುತ್ತಿರುವಂತೆ ಕವಿಗೆ ಮರುಕಳಿಸಿ, ಹೆತ್ತಕರುಳಿನ ಪ್ರೀತಿ ಮುತ್ತಿಟ್ಟು ಬರುವುದರ ಬಣ್ಣನೆ ಹೃದಯವನ್ನು ಕರಗಿಸುತ್ತದೆ:

"ಮಧುರ ಭಾವದ ಗೀತೆ ಹೃದಯ ಮಂದಿರದಲ್ಲಿ
ಕೆಣಕುತಿದೆ ಬಹುದಿನದ ಹಳೆಯ ನೆನಪ
ಮೌನ ಮಂಟಪದಲ್ಲಿ ಮನವು ಮಲಗಿರುವಾಗ
ಮೂಡಿ ಬರುತಿದೆ ಅದರ ಅಲೆಯರೂಪ."

ಮೋಡದ ತುಣುಕು, ಚುಕ್ಕಿಯ ಮಿಣುಕು, ಬಳ್ಳಿಮಿಂಚಿನ ಥಳಕುಗಳಿಂದ ಕೂಡಿದ ರಾತ್ರಿಯ ಆಕಾಶವನ್ನು ಕಂಡು:

"ಬೆಳಕಿನ ಜನ್ಮಕೆ ಕತ್ತಲೆಮೂಲವೊ ಎನೆ ಸೂಸಿದೆ ಬೆಳಕು"

ಎಂಬ ಉದ್ಗಾರ ಮಿಂಚಿನಮೊನೆಯಂತೆಯೇ ತೀಕ್ಷ್ಣ ಸುಂದರವಾಗಿದೆ. ತುಣುಕು ಮೋಡಗಳೆ, ಹೊಳೆವ ತಾರೆಗಳೆ ಬೋಳುಬಾನಿನ ಸೊಬಗಿನ ಸೂತ್ರ

ಗಳೆಂದು ಹೇಳಿರುವುದೂ ಅಷ್ಟೇ ಹೃದ್ಯವಾಗಿದೆ. ಅದೇರೀತಿ 'ಒಂದು ಸಂಜೆ' ಎಂಬ ಕವನವೂ ಮನಸ್ಸನ್ನು ಸೆರೆಹಿಡಿಯುತ್ತದೆ :

"ಹಿಂಡು ಮೋಡಗಳಿಲ್ಲ ಹೊಳೆವ ತಾರೆಗಳಿಲ್ಲ
ಮೈಮರೆತು ಮಲಗಿರುವ ಮುಗಿಲಿನಲ್ಲಿ"

ಕಂದುಬಣ್ಣದ ಒಂದೇ ಒಂದು ಮೋಡ ಅಲ್ಲಿ ಮಂದಗಮನದಿಂದ ಸಾಗಿದೆ–'ಹಲವುನಾಮದ ದೇವನೊಬ್ಬನಂತೆ'. ಈ ಮಾತು ರೂರೂಹ್ಯ ವೆನಿಸಿದರೂ ಅದರ ಹಿನ್ನೆಲೆಯ ಚಿತ್ರ ಅಷ್ಟರಮಟ್ಟಿಗೆ ಅದನ್ನು ರಂಗುಗೊಳಿಸಿದೆ.

ಇಂಥ ಸಂದರ್ಭದಲ್ಲೆಲ್ಲ ಜೀವನದ ಒಂದೊಂದು ತತ್ತ್ವವನ್ನು ಎಳೆದು ಕೊಂಡು ಬರುವ ಪ್ರಯತ್ನ ಓದುಗರ ತನ್ಮಯತೆಗೆ ಭಂಗವನ್ನುಂಟುಮಾಡ ದಿರದು. ಹೀಗಾಗಿ ಇಲ್ಲಿಯ ಕೆಲವು ಕವಿತೆಗಳು ಶಿಥಿಲವಾಗಿವೆ. ಆದರೆ ಅದೇ ಅನುಭವ ಸಂಗ್ರಹವಾಗಿ, ಸ್ವಯಂಪೂರ್ಣವಾಗಿ ಸಹಜವಾಗಿ ಅಭಿವ್ಯಕ್ತಿಗೊಂಡಾಗ ರಸಾನಂದವನ್ನುಂಟುಮಾಡಲು ಸಮರ್ಥವಾಗುತ್ತದೆ. 'ನನ್ನ ಇಂದಿರೆ', 'ಸುಲೋಚನ' ಮುಂತಾದ ಪದ್ಯಗಳು ಇದಕ್ಕೆ ಒಳ್ಳೆಯ ಉದಾಹರಣೆಗಳಾಗಿವೆ.

ವೈಯಕ್ತಿಕ ನೋವು ನಲಿವುಗಳಲ್ಲದೆ ಸಾಮಾಜಿಕ ವಸ್ತುವನ್ನು ಕವಿತೆಗೆ ಅಳವಡಿಸಿಕೊಂಡಾಗಲೂ ಇವರ ಕವಿತಾಶಕ್ತಿ ಕುಂಠಿತವಾಗಿಲ್ಲದಿರುವದು ಗಮನಾರ್ಹವಾಗಿದೆ :

"ಅಧಿಕಾರಕೆ ಆಕ್ರಮಣಕೆ ಕೈಚಾಚಿದೆ ಮನವು
ಹಣಮಾರಿಗೆ ರಣಕಾಳಿಗೆ ಶರಣಾಗಿದೆ ಜನವು"

ಎಂಬುದಾಗಿ ಇಂದಿನ ಜನಜೀವನದ ಸ್ಥಿತಿಯನ್ನು ನಿರೂಪಿಸುವಾಗಲೂ,

"ಬಲಗುಂದಿ ಕಳೆಗುಂದಿ
ಹಿಂಜಿ ಅಪ್ಪಟಿಯಾಗಿ
ಚಿಂದಿಯಾಗಿದೆ ನಮ್ಮ ಬಾಳಸಂತೆ—
ನೀರಿನಲ್ಲಿ ನೆನೆದಿರುವ ಬೆಂಕಿಪೊಟ್ಟಣದಂತೆ"

ಎಂಬ ನುಡಿ ಚಿತ್ರದಲ್ಲಿಯೂ ಆವೇಶದ ಜೊತೆಗೆ ಕಾವ್ಯಗುಣವೂ ಬೆರೆತಿರುವದು ಅಪೇಕ್ಷಣೀಯವಾಗಿದೆ.

(೩)

ಕಾವ್ಯವನ್ನು ರಚಿಸಲಿಕ್ಕೆ ಕವಿಗೆ ಬೇಕಾದ ಮುಖ್ಯ ಸಾಧನ ಸಾಮಗ್ರಿಗಳನ್ನು ಕುರಿತು ಕಾವ್ಯಾವಲೋಕನಕಾರನು ಪ್ರತಿಭೆ, ಕಾವ್ಯವಿದ್ಯಾ ಪ್ರಚಯ ಪರಿಚಯ, ವೃದ್ಧಸೇವಾನುರಾಗ, ಸತತಾಭ್ಯಾಸಪ್ರಯತ್ನ ಇವುಗಳನ್ನು ಕವಿತೆಗೆ ನಿಯತಕಾರಣಗಳಾಗಿ ಸೂಚಿಸಿದ್ದಾನೆ. ಪ್ರತಿಭೆಯೇ ಶಕ್ತಿ, ಲೋಕಾಗಮ ಸಕಲ ಕಲಾವೇದನವೇ ವಿದ್ಯೆ, ಶಾಸ್ತ್ರಾನ್ವಿತನಪ್ಪವನೇ ವೃದ್ಧ, ಆಲಸ್ಯವನ್ನುಳಿದು ಗೈಯುವ ಉದ್ಯೋಗವೇ ಅಭ್ಯಾಸಕರ್ಮವೆಂದು ಅದಕ್ಕೆ ವಿವರಣೆಯನ್ನೂ ಕೊಡಲಾಗಿದೆ. ಪ್ರತಿಭೆಗೆ ಪೋಷಕವಾದ ಅಂಶಗಳು ಇನ್ನೂ ಹಲವಾರಿದ್ದರೂ ಅಭ್ಯಾಸ ಸಂಸ್ಕೃತವಾದ ಪ್ರತಿಭೆ ಕಾವ್ಯಾಮೃತ ಕಾಮಧೇನುವಾಗುತ್ತದೆಂಬ ಹೇಮಚಂದ್ರನ ಮಾತನ್ನಿಲ್ಲಿ ನೆನೆಯಬಹುದು.

ಶಬ್ದಗಳ ಆಯ್ಕೆ, ಛಂದಸ್ಸಿನಹಿಡಿತ, ಅನುಭವದ ಕಾವು, ಚಿತ್ತೈಕಾಗ್ರತೆ ಹಾಗೂ ಕಲಾಸಂಯಮ—ಇವುಗಳ ಕೊರತೆಯನ್ನು ಇಲ್ಲಿಯ ಕೆಲ ಕವಿತೆಗಳು ಒಂದಿಲ್ಲ ಒಂದು ಮುಖದಿಂದ ಒಡನುಡಿಯುತ್ತವೆ. ಈ ಅತೃಪ್ತಿ ಕವಿಗೂ ಇರುವದರಿಂದಲೂ ವಿನಯಶೀಲತೆ ಅವರ ಗುಣವಾಗಿರುವುದರಿಂದಲೂ ಅವರ ಭವಿಷ್ಯದಲ್ಲಿ ನಿಜವಾಗಿಯೂ ನಾನು ಭರವಸೆಯನ್ನು ತಾಳಿದ್ದೇನೆ.

ಗೆಳೆಯ ಚಂದ್ರಶೇಖರಯ್ಯನವರು 'ಮಧುರಯಾನ'ಕ್ಕೆ ಮೊದಲು ನನ್ನ ಈ ನಾಲ್ಕು ನೇಹದ ನುಡಿಗಳನ್ನು ಕೇಳಿಕೊಂಡುದಕ್ಕೆ ಹಾಗೂ ಅವರು ನನ್ನಲ್ಲಿಟ್ಟಿರುವ ಆದರ ವಿಶ್ವಾಸಗಳಿಗೆ ನಾನು ಕೃತಜ್ಞನಾಗಿದ್ದೇನೆ.

೨೮, ಸಾರಸ್ವತಪುರ
ಧಾರವಾಡ.

**ಚನ್ನವೀರ ಕಣವಿ.**

# ಮೊಗ್ಗು

೧

ಮಲ್ಲಿಗೆಯ ಬಳ್ಳಿಯಲಿ
ಮೊಗ್ಗೊಂದು ಮೂಡಿಹುದು.
ಸುಳಿವ ಗಾಳಿಗೆ ಬಳುಕಿ
ಅರಳಲಿಕೆ ಕಾದಿಹುದು.

೨

ಅರಳಿ ಸೌರಭವೀವ
ಸಂತಸಕೆ ನಿಂದಿಹುದು ;
ಜನರ ಮನವನು ಸೆಳೆವ
ಮರುಳಾಟ ಇದಕಿಹುದು !

೩

ನುಡಿತಾಯ ಚರಣವನು
ಪೂಜಿಸುವ ಹಿರಿಬಯಕೆ
ತನ್ನಲ್ಪ ಸೇವೆಯನು
ಸಲ್ಲಿಸುವ ಗುರಿ ಇದಕೆ !

೪

ಅರಳಿ ನಗುವಾ ಮುನ್ನ
ತಿರುಚದಿರಿ ಈ ಮೊಗ್ಗ ;
ನಿತ್ಯವೂ ನೀರನ್ನ
ಎರೆದು ತನ್ನಿರಿ ಹಿಗ್ಗ ;
ಮಾಡಿರುವ ತಪ್ಪನ್ನ
ತೋರಿದರೆ–ಅದೆ ಸಗ್ಗ !!

# ಅಭಿಮಾನ

ಹುಟ್ಟು ಕುರುಡನ ಕರೆದು ಬಟ್ಟೆದೋರಲು ನೆರವ
ನಿಂತು ಯಾಚಿಸಿದಂತೆ, ಮೇಣವನ ಮಳೆಬಿಲ್ಲ
ಬಣ್ಣಗಳ ವಿವರಿಸಲು ಕೇಳ್ದಂತೆ! ಕಾಗದದ
ಹೂವಿನಲಿ ಸೌರಭವನೆಳಪಂತೆ; ಕಿವುಡನಿಗೆ
ಮಧುರ ಸಂಗೀತ ಮರ್ಮವನು ತಿಳಿಸಲಾಹ್ವಾನ
ವಿತ್ತಂತೆ; ಪ್ರತಿನಿತ್ಯ ಪಶುಗಳನು ಕಡಿಕಡಿದು
ಕಠಿಣವಾಗಿಹ ಕಟುಕನೆದೆಯಲಿ ಕಾರುಣ್ಯವ
ನರಸುವಂತೆ; ಪ್ರಳಯ ಕಾಳಿಯ ರುದ್ರಕುಣಿತ
ದಲಿ ಶಾಂತಿ ನೃತ್ಯವನು ಹುಡುಕಲೆತ್ನಿಪಂತೆ!
ಅಭಿಮಾನ ಶೂನ್ಯನಲಿ, ಮೇಣ್ ಅವನಬಾಳಿ
ನಲಿ, ಅನುರಾಗ ಅನುಕಂಪ ಅದೃಶ್ಯತತ್ವ
ಗಳು! ಅದಕಿಂದು ಮಾನವನ ಗುರಿಯಲ್ಲಿ, ಅವನ
ನಿತ್ಯಕರ್ಮಗಳಲ್ಲಿ ಸತ್ಯತೆಯು ಗುರಿಬೇಕು;
ನಂಬುಗೆಯ ಅಭಿಮಾನ ಮೂಡಿಬಂದರೆ ಸಾಕು! ....

# ದೊಡ್ಡವರ ದಾರಿ ನಿನಗಿರಲು ಸಾರಿ

ದೊಡ್ಡವರದಾರಿ ನಿನಗಿರಲು ಸಾರಿ
ಏಕಿಂತು ಚಿಂತೆ ಗೆಳೆಯಾ ?
ಬಂದಿರುವ ವಿಧಿಯು ತಂದಿಹುದೆ ತೊಡರ
ತುಂಬಿಹುದೆ ನಿನ್ನ ತಲೆಯಾ ?

ಅದಕಿಂದು ಏಕೆ ಯೋಚನೆಯ 'ಜೋಕೆ'
ಕೈಗೂಡದಿಹುದೆ ಹರಕೆ !
'ಬಯಸಿದುದು ಎಲ್ಲ ಆಗುವುದೆ ಇಲ್ಲ'
ಅದು ಮಾತ್ರ ನಿನಗೆ ಸಲ್ಲ !

ಸಿಡಿಲೇರಿ ಬರಲಿ, ಮುಗಿಲಿಳಿದು ನಿಲಲಿ
ಕ್ಷಿತಿ ತಾನೆ ಬಿರುಕು ಬಿಡಲಿ
ನಿನ್ನರಿವು ನಿನಗೆ ಗುರಿಯತ್ತನಡಿಗೆ
ಸಾಗಿ ನಡೆ ಸದ್ಗುರುವಿನೆಡೆಗೆ,

ನೋಡುವುದ ಮಾಡು ಅದಕಿಲ್ಲ ಕೇಡು
ಒಳಿತಿರಲಿ ನಡೆವ ದಾರಿ !
ಹಿರಿಯರೇಳಿದ ನಡೆಯು ಅವರ ನುಡಿಯು
ನಿನಗಿರಲು ಏನು ಭಾಽರಿ. ?

ಮೈಯಲ್ಲಿ ಬಲವು, ತಲೆಯಲ್ಲಿ ತಿಳಿವು
ನುಗ್ಗು ಎದೆ ಮುಂದೆ ಮಾಡಿ, !
ದೊಡ್ಡವರ ದಾರಿ ನಿನಗಿರಲು ಸಾರಿ
ಕುಳಿತಿರಲು ನೀನೆ ಹೇಡಿ !!

## ಮರುಕಳಿಸಿದ ನೆನಪು

ಮೂಡಣದಿ ಶಶಿ ಮೂಡಿ ಮೇಲೇರಿ ಬರುತಿಹನು
ಪಡುವಣದ ತಂಗಾಳಿ ಬೀಸುತಿಹುದು.
ನೀಲ ಗಗನವನೆಲ್ಲ ಬಿಳಿಚುಕ್ಕೆ ಬಳಸಿಹವು
ಬೀಸುಗಲ್ಲಿನ ಹಾಡು ಕೇಳುತಿಹುದು !

ಆವುದೋ ಜನಪದದ ಹಾಡ ಹಾಡುತಲಿರುವ
ಕೋಮಲೆಯ ಇನಿದನಿಯು ಎಷ್ಟು ಮಧುರ !
ನಿತ್ಯನೂತನವಾದ ಸತ್ಯಭಾವನ ತಿಳಿಪ
ಭಾವಗೀತೆಯ ಕವಿಯು ಎಂಥ ಚತುರ ?

ಮಧುರಭಾವದ ಗೀತೆ ಹೃದಯ ಮಂದಿರದಲ್ಲಿ
ಕೆಣಕುತಿದೆ ಬಹುದಿನದ ಹಳೆಯನೆನಪ
ಮೌನಮಂಟಪದಲ್ಲಿ ಮನವು ಮಲಗಿರುವಾಗ
ಮೂಡಿ ಬರುತಿದೆ ಅದರ ಅಲೆಯರೂಪ ! ....

* * * *

ದೀವಳಿಗೆ ಹಬ್ಬದಲಿ ದೀಪ ಹಚ್ಚಲುಹೋಗಿ
ಜೆಂಕಿ ತಗುಲಿತು ನನ್ನ ಚಿಕ್ಕ ಕೈಗೆ !
ಪೂಜೆಮಾಡುವ ತಾಯಿ ಓಡಿಬಂದಳು ಆಗ
ತಬ್ಬಿ ಹಿಡಿದಳು ನನ್ನ ತನ್ನ ಮೈಗೆ ! !

ಹಳ್ಳಿ ಔಷಧಿ ಹಚ್ಚಿ, ಬಿಳಿಯಬಟ್ಟೆಯಸುತ್ತಿ
ಜೋಗುಳವ ಪಾಡಿದಳು ನನ್ನ ತಾಯಿ

ಅನುದಿನದ ಶುಶ್ರೂಷೆ ಅಳಿಸಿತೆನ್ನಯ ನೋವ
ಔಷಧಿ ನೆಪಮಾತ್ರ ಶಾಂತಿದಾಯಿ !

ಬೀಸುಗಲ್ಲಿನ ಮುಂದೆ ತಾಯಿ ಕುಳಿತಿರುವಾಗ
ಹಾಡ ಕೇಳುವ ನೆವದಿ ' ನೋವು– ' ಎಂದೆ !
ತಾಯ ತೊಡೆಯಮೇಲೆ ತಲೆಯ ನಾನಿಟ್ಟಾಗ
ನೋವು ಗೀವುಗಳೆಲ್ಲ ಬಹಳ ಹಿಂದೆ!!

" ಮಲಗು ಮಲಗಲೆ ಕಂದ.... ಜೋ.... ಜೋ.... ಕಂದ " ಎಂಬ
ಜೋಗುಳದಲ್ಲೆ ಕಣಸ ಕಾಣುತ್ತಿದ್ದೆ !
ಹೆತ್ತ ಕರುಳಿನ ಪ್ರೀತಿ ಮುತ್ತಿಟ್ಟು ಬರುವಾಗ
ಆಲೋಕ ಸುಖವನ್ನೆ ಸವಿಯುತ್ತಿದ್ದೆ !!

ಆರು ವರುಷದ ಹಿಂದೆ ಸಾರಿಹೋಯಿತು ವಿಧಿಯು
ಕ್ರೂರ ಮೃತ್ಯುವು ನನ್ನ ತಾಯ ಸೆಳೆದು,
ಮಮತೆ, ಮೋಹದ ಮಧುರ ಬಂಧನವ ತುಂಡಿಸಿದ
ವಿಧಿಯು ಕೊರಗಲಿ ನನ್ನ ಶಾಪಬಡಿದು.

# ಬಾನು-ಬಾಳು

ನೀಲ ವಿತಾನದ ವಿಶಾಲ ಬಯಲಲಿ
ಕರಿಮೋಡದ ತುಣುಕು ;
ಮಲ್ಲಿಗೆಹೂಗಳ ಚೆಲ್ಲಿಹತೆರದಲಿ
ಬಿಳಿ ಚುಕ್ಕೆಯ ಮಿಣುಕು ;
ಕಂಡು ಕಾಣದೆಲೆ ಸುಳಿದುಸಾಗುತಿಹ
ಬಳ್ಳಿ ಮಿಂಚಥಳಕು ;
ಬೆಳಕಿನ ಜನ್ಮಕೆ ಕತ್ತಲೆ ಮೂಲವೋ
ಎನೆ ಸೂಸಿದೆ ಬೆಳಕು !

೨.

ಬೋಳು ಬಾ ನಿನಲಿ ಕಾಣೆವಲ್ಲ ನಾವ್
ಇಂಥ ರಮ್ಯ ಚಿತ್ರ ;
ತುಣುಕು ಮೋಡಗಳೆ, ಹೊಳೆವ ತಾರೆಗಳೆ
ಈ ಸೊಬಗ ಸೂತ್ರ ;
ಬಾಳಿನುದ್ದಕೂ ನಲಿವು ನರ್ತಿಸಿರೆ
ಎಲ್ಲಿ ಬಂತು ಸೊಬಗು ?
ಬಾಳರಂಗದಲಿ ಸುಖವ ಕಾಣುವಡೆ
ಸವಿಯಬೇಕು ‘ ಕೊರಗು ’

೩.

ಉರಿವ ಅಗ್ನಿಯಸ್ಪರ್ಶ ಬಿಳಿ ಚಿನ್ನ ಕಾಗದಿರೆ
ಅದಕೆಲ್ಲಿ ಅಪರಂಜಿ ಬಣ್ಣ ?
ಬಾನ ಚಲುವಿಗೆ ಮೋಡ‘ ಬಾಳ ಚಲುವಿಗೆ ದುಗುಡ
ಇಲ್ಲದಿರೆ, ತಣಿಸುವುದೆ ಕಣ್ಣ .... ?

೪.

ನೋವು ನಲಿವುಗಳ ನಿಮಿಷ ಒಂದರಲಿ
ಕಣ್ಣ ಮುಂದೆ ಹಿಡಿದು ;
ಸುಪ್ತ ಚೇತನವ ಸದ್ದು ಮಾಡದಲೆ
ನಿದ್ದೆಯಿಂದ ಸೆಳೆದು ;
ಬಾಳ ಗುರಿಯೆಡೆಗೆ ದಾರಿ ತೋರುತಿದ
ದಿವ್ಯ ಶಕ್ತಿ ಹಿರಿದು !

# ಒಂದು ಸಂಜೆ!

ಹಿಂಡು ಮೋಡಗಳಿಲ್ಲ, ಹೊಳೆವ ತಾರೆಗಳಿಲ್ಲ
ಮೈ ಮರೆತು ಮಲಗಿರುವ ಮುಗಿಲಿನಲ್ಲಿ!
ಎತ್ತನೋಡಿದರತ್ತ, ನೀಲ ಮೌನದ ಮೊತ್ತ
ತುಂಬಿ ತುಳುಕಿಹುದಿಲ್ಲಿ; ಬಯಲಿನಲ್ಲಿ!!

ಕಂದು ಬಣ್ಣದ ಮೋಡ, ಒಂದೆ ತುಣುಕದು ನೋಡ
ಮಂದ ಗಮನದಿ ಸಾಗಿ ನಡೆಯುತಿಹುದು!
ಕವಿಯ ಕಲ್ಪನೆಯಲ್ಲಿ, ಭುವಿಯ ಭಾವುಕರಲ್ಲಿ
ನೂರಾರು ಚಿತ್ರಗಳ ರಚಿಸುತಿಹುದು!

ವರುಣದೇವನಿಗಾಗಿ ಮೊರೆಯಿಡುವ ರೈತನಿಗೆ
ತುಣುಕುಮೋಡವೆ ಒಂದು ಹಿರಿಯ ಆಸೆ;
ಬಿಸಿಲ ಬೇಗೆಗೆ ಒಣಗಿ, ಹಸಿರು ಬಣ್ಣವ ಉಡುಗಿ
ಸುಳಿವ ಪಯಿರಿಗೆ ಅದುವೆ ಜೀವದಾಸೆ!

ಊರು ಕೇರಿಯಮೇಲೆ ದಾರಿ ಮಾಡುತಲಿಹುದು;
ಆವಯಕ್ಷನ ನುಡಿಯ ಒಯ್ಯುತಿಹುದೋ!
ದೂರ ದೂರಿನಲಿರುವ ಆವ ಪ್ರಣಯಿಗೆ ತಾನು
ಪ್ರೇಮ ಪತ್ರವ ನೀಡೆ ಸಾಗುತಿಹುದೋ!!

ನೀಲಿ ಸೀರೆಯ ನಾರಿ ಕೇಶರಾಸಿಯಲಿಟ್ಟ
ಘಮ ಘಮಿಪ ಸೌರಭದ ಪುಷ್ಪದಂತೆ;

ಕಾಣುತಿದೆ ಈ ಮೋಡ, ಕಣ್ತೆರೆದು ನೋಡ ;
ತುಂಬಲಿದೆ ಕಲ್ಪನೆಯ ಭಾವಸಂತೆ !
ಏನಾದರೇನಂತೆ ?—ಇರುವುದೊಂದೇ ತುಣುಕು ;
ಹಲವು ನಾಮದ ದೇವನೊಬ್ಬನಂತೆ !!

---

# ನೆರಳ ಸಂತೆ

ಚಂದಿರನ ಬೆಳಕಿನಲಿ, ಒಬ್ಬನೇ ಮೌನದಲಿ,
ಅರಿವಿನಾದಿಯ ಹಿಡಿದು ನಡೆಯುತಿದ್ದೆ ;
ಆವುದೋ ಯೋಚನೆಯ ಭಾರದಲಿ ನೋಟವನು
ನನ್ನ ನಡಿಗೆಯ ಸುತ್ತ ಸುಳಿಸುತಿದ್ದೆ !

ನನ್ನ ದೇಹದ 'ಛಾಯೆ' ನಾಕು ದಿಕ್ಕಿಗು ಚಾಚಿ,
ನನ್ನ ನಿಲುವಿಗು ಮೀರಿ ನೆಲವ ಬಾಚಿ ;
ಮಲಗಿದ್ದವವು ತಮ್ಮ ಮಸಕು ರೂಪವ ಬೀರಿ
ಮೂಲವ್ಯಕ್ತಿಯ ಇರವ ಸಾರಿ, ಸಾರಿ !

ನಾನು ನಡೆದಂತೆಲ್ಲ ನಡೆದು ಬಂದವು ಎಲ್ಲ
ನಿಲ್ಲಲವುಗಳು ಎಲ್ಲ ನಿಂತವಲ್ಲಿ ;
ಕಳ್ಳನನು ಹಿಡಿತರಲು ಮೆಲ್ಲ ಮೆಲ್ಲನೆ ಹೊರಟ
ಗುಪ್ತ ನೌಕರನೆನುವ ರೀತಿಯಲ್ಲಿ !

ಕಾಮ ಕ್ರೋಧಗಳೆಂಬ ಮಾನವನ ಶತ್ರುಗಳು
ಬೆಂಬಿಡದೆ ಹಿಡಿದವನ ಕಾಡುತಿಹವಂತೆ ;
ಲೆಕ್ಕದಲಿ ಅವು ಆರು, ಮೃತ್ಯು ಸೇವಕರವರು
ನರರ ತಪ್ಪನು ಕಾದು ಕುಳಿತಿರುವರಂತೆ !
ನಮ್ಮ ಹಿಮ್ಮಡಿಯಲ್ಲಿ ನಾವು ಕುಳಿತಿಹುದೆಂಬ
ನಂಬುಗೆಯ ಹುಟ್ಟಿಸುವುವೀ ನೆರಳ ಸಂತೆ !!

# ಕೋಗಿಲೆ ಮತ್ತು ಮಿಣುಕುಹುಳು!

ದಿನದ ಬಳಲಿಕೆಯಲ್ಲ ದಣಿವಾಗಿ ಬಂದಿತ್ತು
ಸಂಜೆಯಾದರು ಬಿಡದೆ ಕೂಗುತ್ತಿತ್ತು ;
ಅದರ ಗಾನದ ಅಲೆಯು ಊರನೆಲ್ಲವತುಂಬಿ
' ಶುಭವಿರಲಿ ಜನಗಳಿಗೆ ಎಂದು ನಂಬಿ '
ಸುತ್ತನೋಡುತ ಹಾಡಿ ಕುಳಿತಿತ್ತು ಕೋಗಿಲೆಯು
ಮುತ್ತಿ ಬಂದಿತು ಅದಕೆ ತುಂಬ ಹಸಿವು!
ಆಸೆ, ಆಕಾಂಕ್ಷೆಯಲಿ ಕಣ್ಣ ಸುಳಿಸಿತು ಸುತ್ತ
ಕಂಡಿತೇನನೋ ಅಲ್ಲಿ ಕತ್ತಲತ್ತ !!

ಮಿಣಕು ಹುಳುವೊಂದಲ್ಲಿ ಹಾರಾಡಿ ಬೆಳಗಿತ್ತು,
ಹಸಿವಿನಾತುರವದಕೆ ಕಾಡುತಿತ್ತು ;
ಮಧುರಗೀತೆಯ ಹಕ್ಕಿ ಹಾರಿ ಬಂದಿತು ಆಗ
' ಉದರಕಾಯಿತು! '– ಎಂದು ನಗುತ ಬೇಗ!
ಕೋಗಿಲೆಯ ಆಶೆಯನು ಅರಿತು ನುಡಿಯಿತು ಹುಳುವು
ಬೇಗ ಬೇಗನೆ ತಿಳಿಯಿತದರ ಸುಳಿವು ;
" ನನ್ನ ದೀಪದ ಸೊಗಸ ಮೆಚ್ಚಲಾರೆಯ ನೀನು?
ನಿನ್ನ ಗಾನಕೆ ಮರುಳ ನಿತ್ಯ ನಾನು!
ಹಸಿವಿನಾತುರಕೆನ್ನ ತಿನ್ನುವಾಸೆಯು ನಿನಗೆ
ನಿನ್ನ ಕೆಡಿಸುವ ಶಕ್ತಿ ಇಹುದೆ ನನಗೆ?
ನಿನಗೆ ಹಾಡುವ ಶಕ್ತಿ ನನಗೆ ಬೆಳಗುವ ಶಕ್ತಿ
ಇತ್ತವನು ಇಹನೊಬ್ಬ ದೈವವ್ಯಕ್ತಿ!
ಹಾಡಿನಿಂದಲಿ ನೀನು, ಬೆಳಕಿನಿಂದಲಿನಾನು

ಬೆಳಗೋಣ ಈ ರಾತ್ರಿ ನಾನು ನೀನು!—"
ಎಂದು ದೀಪದ ಹುಳುವು ಚಂದದಿಂದಲಿ ನುಡಿಯೆ
ತಲೆಯತಗ್ಗಿಸಿತಾಗ ತಿಳಿಯಲಡುವೆ!....

*    *    *    *

ಹಾಡಿನ ಹಕ್ಕಿ ಕೇಳಿತದರ ಪುಟ್ಟ ಭಾಷಣ,
ಆದನ ಬಿಟ್ಟು ಹಾರಿಹೋಯ್ತು ಕೇಳಿ ಬೊಧನ!
ಹುಡುಕಿತೆಲ್ಲೋ ಬೇರೆ ತಿನಿಸ ಹಸಿವನಿಂಗಿಸೆ
ಕಥೆಯ ಕಟ್ಟು, ನೀತಿಗುಟ್ಟು ನಿಮಗೆ ತಿಳಿಯಿತೆ?

(W. Cowper ನ ಕವನವೊಂದರಿಂದ)

# ಏನ ಬರೆಯಲಿ ಗೆಳತಿ ?

ಅಕ್ಕರೆಯ ನುಡಿಗಳನು ಹೊತ್ತು ತಂದಿಹ ಪತ್ರ
ನಮ್ಮ ಗೆಳೆತನಕದುವೆ ಪರಿಪೂರ್ಣಸೂತ್ರ ;

ಬರೆದಿರುವ ಪತ್ರವನು ಜರೆದಿಹರು ಹಲಕೆಲರು
' ಅರಿಯದಿಹ ಹುಡುಗರಿವು, ಬರೆಯುತಿವೆ '–ಎನ್ನುವರು !

ಮಾತುಗಳಿಗೇನಂತೆ ?– ಸುಂಕವಂತೂಇಲ್ಲ
ಪ್ರೀತಿ ಪ್ರೇಮದ ಹಾದಿ ಸುಗಮವೆಂಬುದು ಸಲ್ಲ

ಬೀಗವಿಲ್ಲದ ಬಾಯಿ ಒಟಗುಟ್ಟಲೇನಂತೆ ?
ಹುಚ್ಚರಾಡಿದ ಮಾತು ಲೆಕ್ಕಕ್ಕಿಲ್ಲವಂತೆ !

ನಿನ್ನೆ ಬರೆದಿಹ ಪತ್ರ ಇಂದು ಕೈಸೇರಿಹುದು
' ದೂರ–ಹತ್ತಿರ ' ವೆಂಬ ಶಂಕೆಯನೆ ಅಳಿಸಿಹುದು

' ಎಂದು ಬರುವಿರಿ ? ' ಎಂಬ ಚಿಕ್ಕಪ್ರಶ್ನೆಯು ಕೊನೆಗೆ
ತಂದಿಹುದು ಕಲ್ಪನೆಯ ನುಣ್ಪು ಸುಖವನ್ನೆನಗೆ !

ಬರಿದಾದ ಬಾಳನ್ನು ತುಂಬಿರುವ ಓ ಗೆಳತಿ !
ಏನಬರೆಯಲಿ ಎಂದು ಚಿಂತಿಸಿದೆ ನನ್ನ ಮತಿ !!....

---

# ' ನನ್ನ ಇಂದಿರೆ '

೧

ಸದ್ದು ಮಾಡದೆ ಕದ್ದು ಬಂದು
ಕಣ್ಣು ಮುಚ್ಚಿದಳಿಂದಿರೆ!
ಯಾರು? ಏನು? ಎಂದು ಕೇಳಲು
ಮಾತನಾಡದೆ ನಿಂತಿರೆ;
ಹೆಸರ ಹೇಳುವತನಕ ಬಿಡೆನೆಂ
–ದ್ದಟವ ಮಾಡಿ ಹಿಡಿದಿರೆ;–
ಹೇಳಿದೆನು ಸಂತಸದಿ ನುಗುತಲಿ
' ನನ್ನ ಒಲವಿನ ಇಂದಿರೆ '

೨

ಕೆಂಪು ತುಟಿಗಳ ನಡುವೆ ತುಣುಕಿದ
ನಗುವ ಹೀರಲು ಅವಳನು,
ಬಾಚಿ ತಬ್ಬಲು ತವಕ ಗೊಂಡಿಹ
ನನ್ನ ಬಾಹುಗಳೆರಡನು,
ತಡೆದು ನುಡಿದಳು ' ನನ್ನ ಪ್ರಶ್ನೆಗೆ
ಹೇಳಿರೀಗುತ್ತರವನು?'–
ಎಂದ ಮಾತಿಗೆ ತಲೆಯು ತಿರುಗಿತು
ಏನು ಮಾಡಿದೆ ತಪ್ಪನು?

೩

ಹೆದರು ಮನಸಿಲಿ ' ಆಗಲೆಂದೆನು '!
ಅವಳ ತುಟಿಯನೆ ನೋಡುತ;
ಏನೋ ಎಂತೋ ಎಂಬ ಭೀತಿ

ಕಿವಿಯ ನೆಟ್ಟಗೆ ಮಾಡುತ !
'ಕಥೆಯ ಬರೆವಿರಿ, ಕವನ ಹೊಸೆವಿರಿ
ಬರಿಯ ತತ್ವವ ಕೊರೆವಿರಿ !
ಪ್ರೇಮಕವನವನೇಕೆ ಬರೆಯಿರಿ ?
ನನಗೆ ಉತ್ತರ ಹೇಳಿರಿ ! '—

೪

ತುಂಬಿ ತುಟಿಯಲಿ ನಿಂದ ನಗುವನು
ತಳ್ಳಿ ಹಿಂದಕೆ ನುಡಿದೆನು ;
'ನಿನ್ನ ಒಲವಿಗೆ ತಕ್ಕ ಗೀತೆಯ
ರಚಿಸ ಬಲ್ಲೆನೆ ?–ತಿಳಿಯೆನು !
ನಿನ್ನ ನಡೆ-ನುಡಿ ಒಲುಮೆ ಬಂಧನ
ನೀನೆ ನನ್ನಯ ಪ್ರೇಮವು !
ಇಂತಿರಲು ನನಗೇಕೆ ಕವನದ
ಹುಚ್ಚು ರಚನೆಯ ಮೋಹವು.
ಕಣ್ಣಿಗೆಟುಕದ ಕೈಗೆ ನಿಲುಕದ
ಪ್ರೇಮಿಗದುವೆ ಕೆಲಸವು

೫

ನನ್ನ ಮಾತಿಗೆ ಅವಳು ನಕ್ಕಳು
ತನ್ನ ತುಟಿಗಳ ಕೊಂಕಿಸಿ
ರಾಗ ರಂಗಿಲಿ ಮುಖವು ಬೆವರಿತು
ಆಶೆಯಿಂದಲಿ ನಿರುಕಿಸಿ !
ಕಣ್ಣನೋಟದಿ ನನ್ನ ಸೆಳೆಯುತ
ಮುಖವ ತಂದಳು ಹತ್ತಿರ !
ನಮ್ಮ ಆಟವ ನೋಡಿನಲಿಯುತ
ಮೂಡಿ ಬಂದನು ಚಂದಿರ !!

## ಸುಲೋಚನ!

೧

ಏನು ನಗುವು, ಏನು ಮುದವು,
        ಇವಳ ಪುಟ್ಟ ಮುಖದಲಿ ;
ಸಾವು, ನೋವು ಇರದ ತಾವು !–
        ಕಂಡೆನಿಲ್ಲೀ ನಗೆಯಲಿ !

೨

ಕೈಯ ಬೀಸಿ, ಮೈಯ ಚಾಚಿ
        ಕರೆವುದವಳ ಸಡಗರ !
ಪುಟ್ಟ, ಪುಟ್ಟ ಹೆಜ್ಜೆಯಿಟ್ಟು
        ನಡೆಯಲೇನು ಅವಸರ ? !

೩

ಭಾಷೆಯಿಲ್ಲ, ಅರ್ಥವಿಲ್ಲ
        ಅವಳ ತೊದಲು ನುಡಿಯಲಿ,–
ಆದರೇನು ? ಅದುವೆ ಜೇನು !
        ನಮಗೆ ನಿತ್ಯ ದೊರೆಯಲಿ !!

೪

ಒಂದೆ ವರುಷ ಅವಳಿಗಿನ್ನು–
        ತರಳೆ, ಮುಗ್ಧೆ, ಚಲುವೆಯು !
ಅವಳನೋಟ, ಚೆಲುವಿನೂಟ
        ಸುಖದ ಸಿರಿಯ ಚಿಲುಮೆಯು !

೫

ನಕ್ಕು ನಗಿಸಿ, ನಲಿವನುಣಿಸಿ
        ಒಲವಿನಲ್ಲಿ ತೇಲಿಸಿ–

ಇಹದ ಕಷ್ಟಗಳನ್ನು ಮರೆಸಿ
ನಡೆಸಿಹಳೀ ರೂಪಸಿ !

೬

ದಿಟ್ಟಪಡೆದ ಹುಟ್ಟುಕುರುಡ
ಪಡುವನೆಷ್ಟು ಸಂತಸ ?
ಅಂತೆ ನಮಗೆ ಇವಳ ಹುಟ್ಟು ;
ಉಕ್ಕಿಬರಲಿ ಉಲ್ಲಸ !

೭

ದಿನವು ದುಡಿವ ನಮ್ಮ ಬಾಳು
ತರುವುದಯ್ಯೋ ಬೇಸರ !
ಇರುವುದೇನು ? ಇವಳನಗುವೆ
ನಮ್ಮ ಜೀವಕಾಸರ !!

೮

ಹಸಿರು ಗಿಡದಿ ಮೂಡಿಬರುವ
ಹೂವಿನಂತೆ ಶೋಭೆಯು !
ಇಬ್ಬರಿದ್ದ ಮನೆಗೆ ಅವಳು
ನುಸುಳಿ ಬಂದ ರೀತಿಯು.

೯

ದಿನದ ಮುನ್ನ ಮೂಡಿಹೊಳೆವ
'ಬೆಳ್ಳಿ' ಚಿಕ್ಕೆಯಂದದಿ !
ನಮ್ಮ ಬಾಳ ಗಗನದಲ್ಲಿ
ಮೂಡಿ ಬಂದಳಂದದಿ !

೧೦

ಕಷ್ಟ, ನಷ್ಟಗಳೆಷ್ಟೆ ಬರಲಿ,
ಇವಳ ಹರುಷ–ವೆಚ್ಚಲಿ !
ಅಲ್ಲಿ ನಲಿವ ಯೋಗ ನಮಗೆ.
ಮನೆಯನೆಲ್ಲ ಬೆಳಗಲಿ !!

೧೧

ಕತ್ತಲಲ್ಲಿ ಬೆಳಕ ಕಿರಣ !
  ಹಸುಳೆಯೀ **ಸುಲೋಚನ**
ನಮ್ಮ ಬಾಳ ಬೇಸರಕ್ಕೆ
  ಇವಳ ನಗೆ, ವಿಮೋಚನ !!

---

## ' ಸಹೃದಯರಿಗೆ ! '

ನಮಿಸುವೆನು ನಿಮಗೆಲ್ಲ ಓ ! ಕಾಲ ಜೀವಿಗಳೆ
ನನ್ನೆದೆಯಲಿಹ ನೆನಹನೆಲ್ಲ ಸುರಿದು.
ಗಗನ ಸದೃಶ ನಿಮ್ಮ ಗೆಳೆತನದ ಅಮರತೆಯು ;
ನನ್ನ ಕಲ್ಪನೆಗಂತು ಅದುವೆ ಹಿರಿದು !
ಬರೆವ ಹವಣಿಕೆಯೆಲ್ಲ ಬರಿದು ಬರಿದಾಗಿಹುದು,
ಸೋಲನಪ್ಪಿದೆ ಹೃದಯ ಗುರಿಯ ಮರೆತು ;
ಕನ್ನಡದಿ ಗೆಳೆತನಕೆ ಲಕ್ಷ ಸಾಕ್ಷಿಗಳುಂಟು,
ಮತ್ತೆ ಬರೆದಿಹೆ ನಾನು ಅದನೆ ಕುರಿತು !
ಬೇಸರವೆ ಬಂಧುಗಳೆ ಹಳೆಯ ಕತೆ ತಾನೆಂದು ?
ನನ್ನವರ ಕತೆ ; ಕೃಪೆ ಮಾಡಿ ಕೇಳಿ.
ನವ್ಯ ಕವಿತೆಯು ಅಲ್ಲ, ಕತೆ ಸುಧಾಮನದಲ್ಲ
ನಿಮಗೆ ರುಚಿಸುವುದೆಂತೋ ? ನನಗೆ ಹೇಳಿ.

* * * *

' ನೋಡಲ್ಲಿ ನೇಹಿಗನೆ, ಕನ್ನಡದ ಗತಸಿರಿಯ
ಇಲ್ಲೆ ಆಳಿದರಂತೆ ಹಕ್ಕ-ಬುಕ್ಕ ! '
ತುಂಗಭದ್ರೆಯ ದಡದಿ ನಾವಂದು ಕುಳಿತಾಗ
ಕಂಡ ಕನಸುಗಳೆಷ್ಟೋ-ಯಾವ ಲೆಕ್ಕ ?
ತಾಯಪ್ರೇಮಕೆ ನಾವು ಬಾಲ್ಯದಲೆ ಹೊರತಾಗಿ
ದೈವ ಕೂಡಿಸಿತೆಮ್ಮ ಬೆಸುಗೆ ಬೆಸಸಿ ;
' ಏನ ಬರೆವಿರೋ ನೀವು ? ಅದಕಿರಲಿ ಬಿಸಿಕಾವು ! '
ನಸುನಗುತ ನುಡಿದೆ ಮೆಚ್ಚುಗೆಯ ಸೂಸಿ.
ನಿನ್ನ ಮಾತಿನ ಹೊಳಹು ನನ್ನ ಬರಹಕೆ ಸುಳಿವು,
ಅರಿತಿಹೆನು ನಿನ್ನ ನಾ ಗೆಳೆಯ ' **ಮಲ್ಲೇಶಿ** ! '

ನಿಮ್ಮ ನಡೆ ನುಡಿಗಳಲಿ ತುಂಬಿ ತುಳುಕಿದೆ ಮಿತ
ಕನ್ನಡದ ನಾಡು–ನುಡಿ ನಿಮಗೆ ಹಿತ !

* * * *

ಬೇಲೂರು ಪ್ರಾಂತದಲಿ ಬೆಳೆದು ಬಂದವರಾಗಿ
ಕಲೆಯ ಅರಿಯುವ ಬಯಕೆ ನಿಮ್ಮದಾಗಿ
ಬಾಳರಂಗದಲಿ ಮೃದು ಹೃದಯಿ '**ಆನಂದ**'
ನಿಮ್ಮ ಕಣ್ಣಿನ ಹೊಳವು ಅದುವೆ ಚಂದ !
ಬೇಡಿದವರಿಗೆ ಇಲ್ಲವೆನ್ನುವ ಗುಣ ನಿಮ್ಮದಲ್ಲ
ವಿನಯ, ಔದಾರ್ಯದಲಿ '**ಸಿದ್ಧವೀರ**'
ಹಿಡಿದ ಕಾರ್ಯಕೆ ಬಿಡದೆ ದುಡಿಯುವ ಹಿರಿಯಗುಣ
ಗೆಳೆಯ ವೃಂದಕೆ ನೀವೆ ತತ್ವಸಾರ !
ಉಡುಗೆ, ತೊಡುಗೆ ನಡೆ ನುಡಿ ಕೆಲಸ ಕಾರ್ಯಗಳಲ್ಲಿ
ಶ್ರದ್ಧೆಯೆಂಬುವ ಹಿಡಿತ ನಿಮಗೆ ಸಾಜ.
ಗೆಳೆತನಕೆ ಸರ್ವವನು ಅರ್ಪಿಸುವ ಔಚಿತ್ಯ,
ಹುಟ್ಟುಗುಣ ನಿಮ್ಮದದು '**ಬಸವರಾಜ**'

* * * *

ದೂರದ ಗಿರಿಯ ತುದಿಯಿಂ ಹುಟ್ಟಿ ಹರಿಯುವ ಹೊಳೆಗೆ
ದಾರಿಯಲಿ ಸೇರುತಿಹ ನದಿಗಳಂತೆ
ನನ್ನ ಬಾಳಿನ ಹೊಳೆಗೆ ಸೇರಿಬಂದನು '**ವಿಶ್ವ**'
ಹೃದಯದೊಲವನೆ ಜೊತೆಗೆ ಸುರಿವ ಚಿಂತೆ !....
ನಲವಿನಲಿ ಬೆಳೆದವನು ನೋವಿನಲಿ ನರಳುತಿಹೆ
ವಿಧಿಯ ವಿಕೃತ ದೃಷ್ಟಿ ನಿನ್ನ ಮೇಲೆ ;
'ಬೇಸರಿಸದಿರು ಬಾಳ !' –ಇದು ನಿನಗೆ '**ಶೇಖರ**'
ಕಷ್ಟ ಸುಖಗಳು ನರಗೆ ನಿತ್ಯ ಲೀಲೆ !
ನಗುತ ನಡೆವುದು ನಿಮ್ಮ ನಿತ್ಯ ಜೀವನ ಹಿರಿಮೆ
ಸಂದಿಗೊಂದಿಯ ಸುದ್ದಿ ನಿನ್ನ ಬಳಿಗೆ !

ಕೊರಿಯ ಕಾಶ್ಮೀರ ಪೋಲ್ ಅರವಿಂದ ಶಂಕರ
ಸರ್ವವೂ ನಿನ್ನ ನಾಲಗೆಯ ತುದಿಗೆ ;
ಚುಚ್ಚಿ ನುಡಿದರು ನೀನು ಮೆಚ್ಚಿಕೊಳ್ಳುವೆ, ' ಸ್ವಾಮಿ '
ಸ್ನೇಹಿತರು ಇಟ್ಟಿರುವ ಹೆಸರು ನಿನಗೆ !

o o o o

ನಮಿಸುವೆನು ನಿಮಗೆಲ್ಲ ಓ ! ಬಂಧು ಜೀವಿಗಳೆ
ನನ್ನೆದೆಯಲಿಹ ನೆನಹನೆಲ್ಲ ಸುರಿದು,
ಗಗನ ಸದೃಶ ನಿಮ್ಮ ಗೆಳೆತನದ ಅಮರತೆಯು
ನನ್ನ ಕಲ್ಪನೆಗಂತು ಅದುವೆ ಹಿರಿದು !

## ‘ ಚಿತ್ರಚಲುವೆಗೆ ’

೧

ಹಸಿರು ಸೀರೆಯನುಟ್ಟು, ಕಪ್ಪು ಬಳೆಗಳತೊಟ್ಟು,
ಒಪ್ಪಾಗಿ ನಡೆಯುತಿಹ ಚಲುವೆ ನೀನಾರು ?
ಎದೆಯ ಮುಚ್ಚಿದ ರವಿಕೆ, ಉಬ್ಬಿಹುದು ಯೌವನಕೆ
ಮಬ್ಬು ಬರಲಿದೆ ಜಗಕೆ.... ಯಾವ ಊರು ?
ಕುಪ್ಪಸದ ಬಿಗಿತಕ್ಕೆ, ಅಪ್ಪಿಹೋಗಿವೆ ತೋಳು
ತಪ್ಪು ಯಾರದು ಬೇಗ ತಿಳಿದು ಹೇಳು !
ಕೆಂಪು ತುಟಿಗಳ ನಡುವೆ ಕೊಂಕು ನಗೆ ಸುಳಿಯುತಿದೆ
ಬಿಂಕದಲಿ ಒಳ ದನಿಯ ತಿಳಿಯೆ ಕೇಳು

೨

ಬಿಂದಿಗೆಯ ಭಾರಕ್ಕೆ, ಕಂದಿಹೋಗಿದೆ ಮುಖವು
ಇಂದುವದನೆಯೆ ಮುನಿಸು ಯಾರ ಮೇಲೆ ?
ಕೊಡವ ಹೊತ್ತಿಹ ನಡುವು, ಬಳುಕುತಿದೆ ನಡೆವಾಗ
ಥಳಕು ಸೀರೆಯ ಕವುಲೆ.... ಮುಗುದ ಬಾಲೆ !
ಯಾರ ಪ್ರೇಮದ ದಾಹ ಕರೆಯುತಿರೆ ತಣಿಸಲ್ಕೆ
ಮೀರಿ ಹೋದಿತು ಕಾಲ ಬೇಗ ಹೋಗು !
ಯಾವ ಕಾಲದ ರಾಗ ವೀಣೆಯನೆ ನುಡಿಸುತಿರೆ
ತಂತಿ ಹರಿಯುವ ಮುನ್ನ ಬೇಗ ಸಾಗು !!

೩

ಹಣೆಯ ಮೇಲಿಹಬೊಟ್ಟು, ನಾರಿಧರ್ಮದ ಗುಟ್ಟು
ಸಾರುತಿದೆ ಜಗಕೆಲ್ಲ ‘ ಅಚ್ಚುಕಟ್ಟು ’
ಋಷಿಯಲಿಹ ಸಂಯಮವ ; ಕಲಿಯೊಳಿಹ ಬಲತನವ
ಕಲಕಲಿಹ ಆ ನೋಟ ಯಾವ ಮಟ್ಟು ?

ಸುಳಿಗಾಳಿ ಬೀಸುತಿರೆ ಕೋಗಿಲೆಯು ಕೂಗುತಿರೆ
ಮುಂಗುರುಳು ನಿಂತಿಹುದು ಮುಂದೆ ಬಂದು!
ದುಂಡು ದುಂಡಾಗಿರುವ ಆ ನುಣುಪು ಕದಪುಗಳ
ಸನಿಹ ಸುಖವನು ನೆನೆದು ಸೇರಲೆಂದು!!

೪

ತುಂಬು ಸುಂದರ ದೇಹ, ಇಂಬುಗೊಡದಿಹ ನೇಹ
ಬಿಂಬಿಸಿವೆ ಮಾನವನ ಅಮರ ದೃಷ್ಟಿ!
ಬಿಳಿಯ ಹಾಳೆಯ ಮೇಲೆ ಮಾಡಿರುವ ಆ ಚಿತ್ರ
ಮೀರಿಹುದು ನಾಲ್ಮೊಗನ ನಿತ್ಯ ಸೃಷ್ಟಿ!!
ನೋಡುತಿರೆ ನೋಟವದು ನಿಲ್ಲುವುದು ಒಂದೆಕಡೆ
ಮೂಕ ಮಾತಿನ ಎದೆಗೆ ರಸದ ವೃಷ್ಟಿ,
ನೆನೆಯುತಿರೆ ಮನದಲ್ಲಿ ಕಾಣುವನು ಕಲೆಗಾರ
ರೂಪು ಭಾವವ ತಳೆದ ಕಲಾಸಮಷ್ಟಿ!!

(ಕಲಾಪ್ರದರ್ಶನ ವೊಂದರಲ್ಲಿ ನೋಡಿದ ಚಿತ್ರವೊಂದರಿಂದ ಪ್ರೇರಿತ—)

## ' ಅನುಸೂಯು-ಪ್ರಿಯುಂವದೆ '

ವಿಶ್ವಕವಿಗಳ ವಿರಳ ಪಂಕ್ತಿಯಲಿ
ಕಾಳಿದಾಸನಿಗಿಹುದು ಅಗ್ರಸ್ಥಾನ
ಅದಕು ಮಿಗಿಲವನ ರಮ್ಯ ನಾಟಕವು
ಹಲವು ತತ್ವಗಳ ಜೇಂಗೊಡನ ತಾಣ
ಅದುವೆ ಶಾಕುಂತಲವು : ಪ್ರೇಮ–ಸ್ನೇಹದ ತವರು
ಜೀವಂತ ಪ್ರಕೃತಿಯೆ ಅದರ ಜೀವ ದುಸಿರು !

ಶಕುಂತಲೆಯ ಅಮರ ಪ್ರೇಮದ ಸಸಿಗೆ
ಸುಣ್ದನಿಯ ಪ್ರೋತ್ಸಾಹ ಜಲವನೆರೆದು
ಅವಳ ಅನುರಾಗಕೆಲ್ಲವನು ತಾವು
ತೊರೆದು, ಸ್ನಿಗ್ಧ ಸ್ನೇಹದ ಸೊದೆಯ ಸುರಿದು
ತಮ್ಮನೇ ಮರೆತಿರುವ ಕಣ್ವಮುನಿ ಪುತ್ರಿಯರು
ಅನಸೂಯ–ಪ್ರಿಯಂವದೆ ಕಲಾಭಿಮಾನೆಯರು,

ದುಷ್ಯಂತ ಶಕುಂತಲೆಯರ ಬಾಳಿನಲಿ
ಪ್ರೇಮ ಜೀವನಕೆ ಎಡೆಮಾಡಿಕೊಟ್ಟು
' ಮಲ್ಲಿಗೆಯ ಬಳ್ಳಿಗೆ ಬಿಸಿನೀರ ನೆರೆ
ಯುವರೆ ? ' ಎಂದು ಮುನಿಶಾಪ ಮರೆಗಿಟ್ಟು
ಅವಳ ಬಾಳಿಗೆ ಸುಖವ ಕೋರಿ ತಂದವರಿವರು
' ಗೆಳತಿಯಿಲ್ಲದ ವನ ಶೂನ್ಯ ' ವೆಂದರಿವರು....

ಹಾಲಿನಾ ಸಿಹಿರುಚಿಗೆ ಅದನೆ ಕಡು ನೆನೆದು
ಹಾಲನೀಡಿದ ಹಸುವ ಮರೆತರೆಂತು ?

ಪ್ರಣಯ ಗೌರವಕೆ ಅವಳ ತ್ಯಾಗಕ್ಕೆ
ಶಕುಂತಳೆಯ ನೆನೆವೆವು ನಾವು ಇಂತು ;
ಅವಳ ಜೀವನ ರಥಕ್ಕೆ ಗಾಲಿಗಳಿವರು
ಚಲುವೆ ಚನ್ನೆಯರಿಬ್ಬರೂ ಮೂಲ ತಂತು !
ಹೆಣ್ಣು ರೂಪದಿ ಸುಳಿದು ಅಮರರಾಗಿಹರಿಲ್ಲಿ
ಗೆಳೆತನವು ಮೈಯಾಂತು ನಿಂತಿಹುದ ಕಾಣಿರಿಲ್ಲಿ

# ಗುರುದೇವ

ವಿಶ್ವದಲಿ ಸೌಂದರ್ಯ ತತ್ವವನೆ ಬೆಳಗಿಸಿದ
ರಸಯೋಗಿ ಕಬ್ಬಿಗನು ಗುರುದೇವ ನೀನು ;
ಸವಿನುಡಿಯ ಪದಗಳಲಿ ಸತ್ಯವನೆ ಹಿಡಿದೆತ್ತಿ
ಬೆಳಗುತಿಹ ನಿನ್ನನುಡಿ ಸಿಹಿತತ್ವ ಜೇನು !

ಸಾಹಿತ್ಯ ಶಕ್ತಿಯನು, ಶಾಂತಿಸಂದೇಶವನು
ಪರಿಪೂರ್ಣ ಭಕ್ತಿಯಾ ನಿಜತತ್ವವನ್ನು,
ಜಗಕೆಲ್ಲ ಸಾರಿರುವೆ, ಸತ್‌ಪಥವ ತೋರಿರುವೆ
ಅದನರಿಯದಿಹ ಮಾನವಗೆ ಕುರುಡುಕಣ್ಣು !

ನಿನ್ನತುಳ ಹಿರಿತನದ ಜ್ಞಾನದೀವಿಗೆಯದುವೆ
ಪ್ರಕೃತಿ ಚಲುವಿನ **ಶಾಂತಿನಿಕೇತನ !**
ಭಾರತದ ಹಿರಿಮೆಯನು ಸಾರಿರುವೆ ಜಗದಲ್ಲಿ
ನಿನ್ನ ನಡೆ–ನುಡಿ ನಮಗೆ ನಿತ್ಯಚೇತನ !!....

# ' ವಿಜ್ಞಾನಿಗೆ '

ಅಣುಶಕ್ತಿ, ಜಲಶಕ್ತಿ, ಜಗವ ಜಯಿಸುವಶಕ್ತಿ
ಆ ಸರ್ವಶಕ್ತಿಗಳ ವ್ಯಕ್ತಿಯೇನ್ನೈ ನೀನು ?
ಮೇಣ್ ವಿವಿಧಶಕ್ತಿಗಳಯುಕ್ತಿಯಿಂ ಸಾಧಿಪ
ಸಾಧಕನೋ ? ಸರ್ವತತ್ವವನೂ ಕಾರಣದ
ಒರೆಗಜ್ಜಿ ' ಇದವಿುಥ್ಥಂ ! ' ಎಂದು ಸಾಕ್ಷೀಕರಿಪ
ಸಿದ್ಧಾಂತಿಯೋ ? ಓ, ವಿಜ್ಞಾನಿ, ಆಧುನಿಕ ವಿಶ್ವಾ-
ಮಿತ್ರ, ನಿನ್ನ ಸಾಧನೆ ಮೇಣ್ ನಿನ್ನಭಾವನೆ
ಭುವಿಗುಪಕಾರವೆಸಗುವೆಡೆ ಅದುವೆ ಸರಿ, ಲೇಸು !
ಜಗವೆಲ್ಲ ಭೀತಿಯಲಿ ಕಂಗೆಟ್ಟು ಹಳಿಯುತಿದೆ
ನಿನ್ನಯ ಕ್ರೂರ ಶಕ್ತಿಯ ಸೃಷ್ಟಿಯನೆ ಕಂಡು !
ಮಾನವನ ಮತ್ಸರಕೆ ಮೇಣವನ ಅಳಿವಿಂಗೆ
ನಿನ್ನರಿವು ಗುರಿಯಾಗದಿರಲಿ ! ನಿನ್ನ ಪಥದಲಿ
ನಶ್ವರದ ವಿಶ್ವವನು ಗೆಲುವಾಶೆ ಮೂಡದಿರಲಿ !
' ಜಾತಶ್ಯ ಮರಣಂ ಧೃವಂ ' ಎಂಬರಿವಿರಲಿ !

ಫೆಬ್ರವರಿ ೧೯೫೨

# " ಸ್ಮಾರಕ "

೧

ಕಲ್ಲು ಮಣ್ಣು ಕೂಡಿಹಾಕಿ ನಿರ್ಮಿಸುವರು ಭವನವ ;
ಅಳಿದ ಹೆಸರು ಉಳಿಯಲೆಂದು ಏರಿಸುವರು ಕಲಶವ !
ಹೊರಗು ಒಳಗು ಬಣ್ಣ ಬಳಿದು ಮುಗಿಸುತಿಹರು ಕೆಲಸವ

೨

ನಾಡ ಜನರ ನೆರವ ಫಲವು ನಿರ್ಮಿಸಿರುವ ಮಂದಿರ ;
ಅವರ ಬಯಕೆ, ಕಳೆದ ದಿನಕೆ ರೂಪಿಸಿಹುದು ಹಂದರ !
ರಚಿಸಿ ಇರುವ ಭವನ ನೋಡಿ ನಗುತಲಿಹನು ಚಂದಿರ !!

೩

ಅಳಿದ ಪುರುಷ, ನೆನಪಿನರುಷ ಎಂಬುದಕೆ ಕಾರಣ ;
ಭಕ್ತಿ ಭಾವ ತೋರಲೆಂದು ಕಟ್ಟುತಿಹರು ತೋರಣ !
' ಬರಿಯ ಭವನ ಅದರ ಮನನ ' ಎಂಬುದವರ ಭಾವನ ?

೪

ಹಿರಿಯ ಹೆಸರ ತಳೆದ ಜನರು ಬರುವರಂದು ತೆರೆಯಲು,
ಮಡಿದು ಹೋದ ಹಿರಿಯನನ್ನು ; ಹಳೆಯ ನೆನಪ–ನೆನೆಯಲು !
ಸಭೆಯ ಹಿರಿಯ ನುಡಿಯುತಿಹನು ಅವನ ತತ್ವ ಒರೆಯಲು !!

೫

ಕಲ್ಲಮೇಲೆ ಹೆಸರಕೆತ್ತಿ ನೆಟ್ಟರೇನು ಮುಗಿಯಿತೆ ?
ಮಾಡಿಹೋದ ಪಾಪವಿಂದು ಜಲದಿ ಮುಳುಗೆ ಕಳೆಯಿತೆ ?
' ಬರಿಯ ಪಠನ–ಶುಷ್ಕಮನನ ' ಅರಿತುದೇನು ತಿಳಿಯಿತೆ ?

೬

'ಬರಿಯ ಮಾತು ಅವನ ನೆನಪು'! ಯಾವ ತತ್ವ ರೂಪಕ?
'ಮಾತು ಮುಂದೆ ನಡೆಯು ಹಿಂದೆ'–ಬೇರೆಯಿಹುದೆ ಮಾರಕ?
ಅವನ ಸತ್ಯ–ತತ್ವ ನಡೆಯೆ ಆಗಬೇಕು ತಾರಕ!
ನುಡಿಯೆ ನಡೆಯು ಆಗುವಲ್ಲಿ ಅದುವೆ ಅಮರ ಸ್ಮಾರಕ!

---

## " ಇಹುದು ದೂರ-ಇನ್ನು ಪೂರ. ! "

ಕಲ್ಲು ಮುಳ್ಳು ಎಲ್ಲ ತುಳಿದೆ,
ಐದು ಮೈಲಿ ನಡೆದು ಬಂದೆ,
ಮುಗಿದೆಇಲ್ಲ ಗುರಿಯು ದೂರ,
ಇಹುದು ದೂರ ಇನ್ನು ಪೂರ !
ಕಾಲನೆಲ್ಲ ಮುಳ್ಳು ಚುಚ್ಚಿ,
ಗೋರಿ ಚೂರು ಜತೆಗೆ ಕಚ್ಚಿ,
ರಕ್ತ ಬರಿಸಿ ಶಕ್ತಿ ಸವೆಸಿ,
ನೋವು, ಸಾವು, ಹಸಿವ ಸಹಿಸಿ,
ಎನಿತು ದೂರ ಇಂಥ ಕಷ್ಟ ?
ಮುಂದೆ ಇಹುದು ನಿಂತ ಬೆಟ್ಟ
ಹತ್ತ ಬೇಕು ಅದರ ಘಟ್ಟ !

..................................

..................................

..................................

ಅಯ್ಯೋ ! ಇನ್ನು ಸಿಗಲೆ ಇಲ್ಲ
ನೋವು ಮಾತ್ರ ಬಂದಿತಲ್ಲ, !
ಇನ್ನು ಇಹುದು ಕಾಲು ಹಾದಿ
ಸಿಗುವುದೆಂದೋ ರಾಜ ವೀಥಿ
ಸೇರಬೇಕು ಅಂತು ಗುರಿಯ
(ಗಟ್ಟಿ ಇಹುದೆ ನನ್ನ ಹೃದಯ ?)

..................................

..................................

......................................

ಏನೆ ಬರಲಿ, ಎಂತೆ ಇರಲಿ,
ಸಾವು ಕೂಡ ಹಿಡಿದು ತಿನಲಿ!
ನಡೆಯುತಿಹೆನು ನಂಬಿ ನನ್ನ;
ಬಂದರೇನು ಇಂಥ ಬನ್ನ?

*　　　*　　　*　　　*

ಮುಗಿಯಿತಲ್ಲೋ ಐದು ವರುಷ
ಕಾಣೆವಲ್ಲ ನಿಮಿಷ ಹರುಷ!
ಮೋಸ, ದ್ವೇಷ, ಹೊಲೆಯು, ಕೊಲೆಯು
ನಮ್ಮ ಜನರು ನಡೆದ ಪರಿಯು!
ಗಾಂಧಿ ಹುಟ್ಟಿ ಬಂದ ದೇಶ!!
ಅವನ ಭಕ್ತರೆಂತ ವೇಷ?
ತತ್ವ ಹೇಳಿ ಗಗನ ತೋರಿ
ಬಡವರೆದೆಯ ರಕುತ ಹೀರಿ!
ನಡೆಯುತಿಹರು ರಥವನೇರಿ!!
ಬಡವ ಸತ್ತ ರಕ್ತ ಕಾರಿ!

*　　　*　　　*　　　*

ಏಳಿ ಏಳಿ ಬಂತು ಕಾಲ
ನಡೆಯದಿನ್ನು ಮೋಸ ಜಾಲ
ಕರೆಯುತಿಹುದು ಕ್ರಾಂತಿ ಕಹಳೆ
ಕೇಳದಿಹುದೆ?– ನಿನಗೆ ಮರುಳೆ!
'ಮೇಲು–ಕೀಳು ಎಲ್ಲ ಅಳಿದು
**ಎಲ್ಲ ಒಂದು** ಎಂಬುದುಳಿದು–'
ನಿಜದ ತತ್ವಕಾಗಿ ಬದುಕು,
ಸಾವ ಕೆಣಕಿ ಜೀವ ನೂಕು!
ನೋವ ತಿಂದ ಭೀಮ ಶಕ್ತಿ
ಹೊರಗೆ ಬಂದು ಸಿಡಿಯಲೇಳು!

ದರ್ಪದಡಿಗೆ ಸಿಕ್ಕ ಸೀನು
ಶಾಂತಿಗಾಗಿ ಕ್ರಾಂತಿಯೇಳು !
ಅಣ್ಣ, ತಮ್ಮ, ಅಕ್ಕ, ತಂಗಿ
ದೇಶ, ಕೋಶನೆಲ್ಲ, ನುಂಗಿ
ಮರೆತು ನಿಂತ ಸ್ವಾರ್ಥ ಭಾವ
ಅಳಿಯಲೇಳು ಅದರ ಜೀವ ;

..................................

..................................

..................................

**' ಬರುವ ವರುಷ ತರಲಿ ಹೆರುಷ '**–
ಎನ್ನುವಾಶೆ ಕೈಯ್ಯ ಹಿಡಿದು
ಮುಂದೆ, ಮುಂದೆ ನಡೆಸುತಿಹುದು
ಗುರಿಯ ತೋರಿ ಕರೆಯುತಿಹುದು !

# ವಿಪ್ಲವ ಕರೆ....

ಜನಜೀವನ ಜೀಯುತ್ತಿದೆ ಸಂಗ್ರಾಮದಿ ಬಿಡದೆ;
ಋಜುಜೀವನ ಅಳಿಯುತ್ತಿದೆ, ನಿಜಪಥದಲಿ ಇರದೆ!
ಅಧಿಕಾರಕೆ, ಆಕ್ರಮಣಕೆ, ಕೈ ಚಾಚಿದೆ ಮನವು;
ಹಣಮಾರಿಗೆ, ರಣಕಾಳಿಗೆ ಶರಣಾಗಿದೆ ಜನವು!!
ಅಣುಯುಗದಿಂ ಚಣ ಚಣಕು ಸಾಗುತ್ತಿದೆ ವಿಜ್ಞಾನ!
ಅಶಾಂತಿಯು ಪ್ರತಿಮನಕು ತಪ್ಪಿಲ್ಲವು ಅಜ್ಞಾನ
ಅಸ್ವಾಸ್ಥತೆ, ಬಲಹೀನತೆ, ನಿರ್ವೀರ್ಯದ ಜನತೆ,
ಕಂಗೆಟ್ಟಿದೆ, ಧೃತಿಗೆಟ್ಟಿದೆ; ಸದ್ಭಾವದ ಕೊರತೆ?
ಸದ್ಧರ್ಮದ, ಸಚ್ಚರಿತೆಯ, ನಿಸ್ವಾರ್ಥದ ದೇಶ:
ದುರ್ನೀತಿಗೆ, ದುರ್ಜೋಗೆ ಬಾಯ್ತೆರೆದಿಹ ಕೋಶ!
ಜೇನಿನಮಳೆ, ಹಾಲಿನಹೊಳೆ ಹರಿದಾಡಿದ ನಾಡು,
ಶ್ರೀ ರಾಮರ, ಅರವಿಂದರ, ಮಹಾತ್ಮರ ಬೀಡು,
ಹಾಳಾಗಿದೆ, ಹೋಳಾಗಿದೆ; ಅನ್ಯಾಯದ ಕಾಡು!
ಉಡಲಿಲ್ಲದ, ಉಣಲಿಲ್ಲದ, ಅತೃಪ್ತಿಯ ಗೂಡು!
ಹಸಿದವರಿಗೆ ಹಸಿವೆಚ್ಚಿದೆ! ಕೊನೆಗಾಲದ ಕೇಡು?
ಸಿರಿವಂತರ ಹೊಂಗಳಸವು ಥಳ ಥಳಿಸಿದೆ ನಿಂತು;
ಬಡವನಮನೆ, ಸೋರುವುದೆನೆ ಮಳೆನಿಲ್ಲದೆ ಬಂತು!
ಅಂತಾಗಿದೆ; ಹಿಂದಿರುಗದೆ ಸುಖಶಾಂತಿಯ ಚಿಹ್ನೆ?
'ಒಂದೆಂ' ಬುದ, ಮುಂದಿಡಿಯಲಿ ಈ ಭಾರತ ಕನ್ನೆ!
ಶಾಂತಿಗೆ ಕರೆ, ಬಂದಿದೆ ಮೊರೆ ಕಿವಿಯಾಲಿಸಿ ಕೇಳಿ;
ನವಪ್ರಾಣವ, ನವಶಕ್ತಿಯ ಸಂಪಾದಿಸೆ ಏಳಿ!

ನಿಸ್ವಾರ್ಥಕೆ, ಸಂತೋಷಕೆ ಉದ್ಭವಿಸಲಿ ಕ್ರಾಂತಿ ;
ವಿಪ್ಲವಕರೆ ಕೇಳಿಸುತಿರೆ, ಹರಿದೋಡಲಿ ಭ್ರಾಂತಿ !
ಅದರಿಂದಲೆ ಮೈತಳೆಯಲಿ ಚಿರನೂತನ ಶಾಂತಿ !!

    ಸಿಡಿದೇಳಲಿ, ದುಡಿಯುವ ಜನ ವಿಪರೀತಕೆ ಹೇಸಿ ;
    ಮಡಿವಂತರ ಗುಡಿ ಗೋಪುರ ಕಡಿದುರುಳಲಿರೋಸಿ !
    ಹೊಸಬಾಳಿಗೆ, ಹೊಸಗಾಳಿಯು ತಣ್ಪೆಸೆಯಲಿ ಬೀಸಿ !

ನಾಡಿನಜನ, ತಿಳಿಯಲಿಮನ, ಅಂತರವನೆ ನೀಗಿ ;
‘ ಕ್ರಾಂತಿ....ಕ್ರಾಂತಿ ! ’–ಎಂದೆಲ್ಲರು ಒಕ್ಕೊರಲಲಿ ಕೂಗಿ,
ಇಂದಿನ ದಿನ, ಮೊರೆಯಲಿ ಜನ, ವಿಪ್ಲವ ತೊರೆಯಾಗಿ !

# ಸುಪ್ತಶಕ್ತಿ !

ಬಲಗುಂದಿ, ಕಳೆಗುಂದಿ,
ಹಿಂಜಿ ಅಪ್ಪಟಿಯಾಗಿ,
ಚಿಂದಿಯಾಗಿದೆ ನಮ್ಮ ಬಾಳಸಂತೆ ;–
ನೀರಿನಲಿ ನೆನೆದಿರುವ ಬೆಂಕಿ ಪೊಟ್ಟಣದಂತೆ !
ಕಪ್ಪು ಹುಡಿಯಂತಿರುವ ಸಿಡಿ ಮದ್ದಿನಂತೆ,
ಇರುವ ಅಧ್ಭುತಶಕ್ತಿ ತಣ್ಣಗಾಗಿಹುದಲ್ತೆ ?

ಶಕ್ತಿಯಂತೂ ಇಹುದು ;
ಭುವಿ ಬಾನನೆಲ್ಲ ಹಿಡಿಯಲಡಗಿಸಬಹುದು !
ಆರ್ಭಟಿಸಿ, ಅಪ್ಪಳಿಸಿ ಕುಣಿದಾಡಲೂಬಹುದು,
ವಿಶ್ವಚಕ್ರವ ಹಿಡಿದು ಜಯ ಗಳಿಸಬಹುದು,
ಆದರೂ ಕುಳಿತಿಹೆವು,
ಮೌನ ತಾಳಿಹೆವು !
ಗಂಡು ರೂಪದ " ಹೆಣ್ಣು ಸಂಗ " ರಂತೆ !
ಬಾಯಿಯಿದ್ದರೂ ಮಾತನಾಡದ ಮೂಕರಂತೆ ? !
ಎಂದು ಮುಗಿವುದೋ ಈ ಹೇಡಿಜೀವನದ ಕಂತೆ ? !

ನೆನೆದಿರುವ ಪೊಟ್ಟಣವು ಬಿಸಿಲಿನಲಿ,
ಒಣಗಿದರೆ,–
ಸುಡುವ ಶಕ್ತಿಯನೆಲ್ಲಿ ಗಳಿಸುವುದು ?
ಹೇಳಿ, ದೊರೆ ?

..............................

ಗಂಟಲಿನ ಒಂದು ನರ
ತಂದಿಹುದು " ನುಡಿಯ ಬರ ! "
ಪುರುಷ ಶಕ್ತಿಯ ಕುಂಠಿಸಿಹ " ಗಂಟು ಸರ !! "
ಇವು ತಾನೆ ಕೊರತೆ ?
ನಮ್ಮಲಿಹ ದುರ್ಬಲತೆ !

ನರ, ಗಂಟುಗಳನೆಲ್ಲ ಸರಿಪಡಿಸಬಹುದು,
ಮಾತು ಬರದವ ಕೂಡ ಮಾತನಾಡಲುಬಹುದು,
ಷಂಡನೂ ಕೂಡ ಗಂಡಸಾಗಲುಬಹುದು !
ವಿಜ್ಞಾನ ಅದನೆಲ್ಲ ಸಾಧಿಸಿಹುದು !!
ಇಂತಿರಲು ನಮಗೇಕೆ ನಿದ್ದೆ ಮಾಡುವ ಹಠವು ?
ನಿದ್ದೆ ಬಾರದೆ ಇರಲು ಅದುತಾನೆ ಚಟವು !
" ಇರುವ " ಶಕ್ತಿಯನೆಲ್ಲ ' ಇಲ್ಲ ! '–
ಎನ್ನಲು ಬೇಡಿ.
**ಇರುವುದರಲ್ಲೆ, ಧರೆಯು ನಡುಗಿಸಬಹುದು**
ತಿಳಿದು ನೋಡಿ !
ಒಳಗಿರುವ ಆ ಶಕ್ತಿ
–ಗೆಲ್ಲಿಯದು ಮುಕ್ತಿ
ಹೊರಬಂದು ಸಿಡಿಯುವುದೆ ಅದಕಿರುವ ಸೂಕ್ತಿ !
ಇಲ್ಲದಿರೆ, ಅದುತಾನೆ ಭೀಭತ್ಸ್ಯ ಭಕ್ತಿ ?

# ನಿಜದ ನಡೆಗಾಗಿ

ನೂಡಣದಿ ಮೂಡಿಹುದು ನಾಕನೆಯ ವರುಷ!
ನಾಡಿನಲಿ ತುಂಬಿಹುದು ಎಡೆಬಿಡದೆ ಕಲುಷ!!

ಮೂರುವರುಷದ ಶಿಶುವು ಜನರಾಜ್ಯಭಾನು
ಹರುಷವಿಲ್ಲದ ಜನಕೆ ಅದುವೆ ಕಹಿಜೇನು!

ಸ್ವಾರ್ಥಸಾಗರದಿ ಮುಳುಗಿಹುದು ಜನವಿಂದು,
ಅರ್ಥವಿಲ್ಲದ ಕೂಗು–'ಶಾಂತಿ ಬೇಕೆಂದು!'

ಶಾಂತಿ ಎನ್ನುವ ಜನವೆ ಸಮರದಲಿ ಇಂದು;
ಭ್ರಾಂತಿಗೊಂಡಿದೆ ಜಗವು, ಅಂತಿಮವು ಎಂದು!

ನಮ್ಮತನವನು ನಾವು ನಿತ್ಯ ಮರೆತಾಯ್ತು;
ಹಮ್ಮು, ಬಿಮ್ಮಿಗೆ ಎಮ್ಮಜನ ಬಲಿಯಾಯ್ತು!

ಹಸಿವು, ಸಂಕಟ, ನೋವು ನಾ ಉಣುವ ಅನ್ನ!
ಅಸಮ ಜೂಜಾಟದಲ್ಲಿಹುದು, 'ಬಾಳು–ಬನ್ನ'

ವೀರವಲ್ಲಭ ಮರಣ, ಅರವಿಂದ ನಿರ್ಯಾಣ;
ಕೊರಿಯವೋ! ಕಾದಿಹುದು ಕಾಶ್ಮೀರ ಹಗರಣ!

ವರ್ಗ, ವರ್ಗದ್ವೇಷ, ನಡೆಸಿಹುದು ಹೋರಾಟ!
ನಿರ್ಣಯಿಸ 'ಯು. ಎಸ್. ಓ.' ಪಕ್ಷ–ಪಾತದ ಕೂಟ?

'**ಬಂದಿರುವ ಕಷ್ಟಗಳು ಬರುವ ಸುಖಕೆಂದು!**'
ಇಂದುಧರನೇ ನಮ್ಮ ಕೈಹಿಡಿದು ನಡೆಸು!!

ಕಂಕಣವ ತೊಡಿರಿಂದೆ, ನಾಡು, ನುಡಿಗಾಗಿ;
ಶಂಕೆಯೇತಕೆ ನಿಮಗೆ ನಿಜದನಡೆಗಾಗಿ?

ಹರಸುತಿಹನದೋ ಸಗ್ಗದಲಿ ದೇವಗಾಂಧಿ!
ಗುರುತರದ ಕಜ್ಜವಿದೆ, ಅದಕಿಂದೆ ನಾಂದಿ!!

# ಅನಂತರ !

“ ಅನಂತರ,......................
ಹುಟ್ಟಿಬಂದಿತು ಹಗೆಯ ಹಾಲಾಹಲದ ಮನ್ವಂತರ !
ದ್ವೇಷ, ಮೋಸ, ಹೊಲೆಯು, ಕೊಲೆಯು, ಎಲ್ಲವನು–
ಮೆರೆಸಿ,
‘ ನರನ ಕೊಂದು, ನೆರೆಯ ತಿಂದು ! ’ ಬದುಕುವಂತೆ ಪ್ರೇರಿಸಿ,
ನಡೆಯುತಿಹುದು ಈ ಜಗ,
ಗಾಂಧಿ ಹುಟ್ಟಿ, ಮಡಿದ ಯುಗ !
ಜನ ತಾಳದೋ ಈ ಉಬ್ಬೆಗ !!

“ ಸತ್ತ ಹೆಣದ ನಗುವಿನಂತೆ ನಮ್ಮ ತತ್ವ, ಸಾಧನೆ !
ಶ್ರಮದ ಎಣಿಕೆ ಇಲ್ಲದಂತೆ ಮಾಡುತಿಹೆವು ಬೊಧನೆ ? !
...............................................
ಒಂದೆ ? ಎರಡೆ ? ಮೂರೆ ? ನಾಲ್ಕೆ ?...............
...........ಬರುವವಿನ್ನೂ ಸಾವಿರಾರು—
ಜಳ್ಳು ಮನಸು ಸಲ್ಲದಿಂದು ; ನಡೆವದಾರಿ ಕಲ್ಲು, ಮುಳ್ಳು !
ಇದಕೆ ಹೆದರಿ ನಿಲ್ಲಲೇಕೆ ?
(ಇಲ್ಲದಿರೆ ‘ ಸಾವು ! ’ ; ಜೋಕೆ !!)

“ ಹೌದು, ಗೆಳೆಯ,
ದುಷ್ಟ ಶಕ್ತಿಗಿಂದು ವಿಜಯ !
................................
ಯಾಕೆ ಮೌನ ? ಎನಿತು ಭಯ ? ಯಾವ ವಿಷಯ !

' ಒಳಿತು–ಕೆಡುಕು ! ' ಎಂಬ ನುಡಿಯ ಜಪಿಸೆ, ಅಲ್ಲ ಸಮಯ !

..............................

ಜನತೆ ಮತ್ತೆ, ಕರೆದುತಂದು, ಪಟ್ಟಗಟ್ಟಿ, ಪೂಜಿಸಿಹುದು !
ವರ್ಣದ್ವೇಷಿ ಮಲನ್ !!
ನೋಡು ಗೆಳೆಯ, ಕಣ್ಣತೆರೆದು, ಕಾಣದಿಹುದೆ ಸಿಲೋನ್ ?

..............................

ದುಷ್ಟ ಶಕ್ತಿಗಿಂದು ವಿಜಯ !
ದುಷ್ಟ ಶಕ್ತಿಗಿಂದು ವಿಜಯ !!

..............................

ಕಣ್ಣು, ಕಿವಿಯು ಎರಡೂ ಕುರುಡೆ ? ಓ, ನನ್ನ ಗೆಳೆಯ !
ಏಳು, ಏಳು, ಮೇಲಕೇಳು ;
ಭೀತಿ, ಭಯವನೆಲ್ಲ ಅಲ್ಲೆ ಹೂಳು !
ಪರಶುರಾಮನಂತೆ ಹಠವ
ದುಷ್ಟ ಶಕ್ತಿಗೆದುರು ತೊಟ್ಟು, ಸೆಣಸೆ, ಏಳು !
ಕೈಯಬೀಸಿ ಮೇಲಕೇಳು !! "

# ಸೋತ ಮನ!

ಸೋತಿದೆ ಮನ!
ಅದಕಿಲ್ಲವು ಶಾಂತಿಯ ದಿನ–
ಶರಣು ಶರಣು ನಿನಗೆ ನಿತ್ಯ ನಿರಂಜನ!

ಸೋತಿದೆ ಮನ,
ಬಿರುಗಾಳಿಗೆ ಒಡ್ಡಿದ ದೀಪದ ತೆರದಲಿ
ಮಿಸುಕಾಡಿದೆ ಅನುದಿನ;
ಕನಸಿನಬಳ್ಳಿಗೆ ಆಶೆಯ ಕುಡಿಚಾಚಿ
ದಿನವ ನೂಕುತಿದೆ 'ಸಾಯುವ ಹೆಣ!'
ಬೇಲಿಯ ಹಣ್ಣಿಗೆ ನೀರೊಸರಿದೆ ಬಾಯಿ,
ತೊಟ್ಟಿಹ ಅಂಗಿಯ ಪರಚಿದೆ ಮುಳ್ಳು;
ಸುಖವೆಂಬುವುದದು ಬಡವಗೆ 'ಸುಳ್ಳು!'
ತೂಗಾಡಿದೆ ಜಗ, ಅಮಲೇರಿದೆ ಸೊಗ; ಸ್ವಾರ್ಥದಕಳ್ಳು?

*　　*　　*　　*

ಹೆಡೆ ಎತ್ತಿ ನಿಂತ ನಾಗರನ ಎದುರು
ಊದಿದನು ಪುಂಗಿ,
ಉಗುಳ ನುಂಗಿ;
ಭೀರಿಡುತಲಿದೆ ಸರ್ಪ, ಅದಕೆಷ್ಟುದರ್ಪ?
ಊದಿದರು ಬಿಡದೆ ಹೊರಡದಿದೆ ಉಸಿರು,
ಪುಂಗಿಯಲಿ ಅಯ್ಯೋ ಕಸರು, ಕಸರು!

..............................

..............................

(ಸೋತಿದೆ ಮನ
ಅದಕಿಲ್ಲವು ಶಾಂತಿಯ ದಿನ–)
ನೆರೆದ ಸಭೆಯಲ್ಲಿ....
ಪಿಸುಮಾತಿನುರವಣೆಯ ಬುಗುರಿಯಾಟ ;
ಅದೋ ನೋಡಿ, ಅಲ್ಲಿ
ಕೆಂಗಣ್ಣಿನುರಿಯ ಕೌರವನ ದರ್ಪನೋಟ,
ನಗುನಗುತ ನುಡಿವ ವಸುದೇವಸುತನ ಸಂಧಾನ, ತಂತ್ರ, ಮಾಟ !
ಶಾಂತಿ ಸಮಿತಿಯಲಿ
ಸಿಂಗ್ಟ್ಹಮನ್ರ್ಥೀ ಬೊಬ್ಬಿರಿದು ನುಡಿವ ಹೂಟ ?
ಕೂಟ ; ತಾಕಲಾಟ !

ಕೇಳಿಸದೆ ? ಕೇಳಿ
ಅರಗಳಿಗೆ ತಾಳಿ ;
ಚಿಮ್ಮಲಿದೆ ಇಂದು ಉದ್ಘೋಷವಾಕ್ಯ :
**'ನಾವೆಲ್ಲರೊಂದೆ ! ಮುಖ್ಯ**
**ಜಗವೆಲ್ಲ ನಮಗೆ ಸಖ್ಯ !!'**
ಜಯಘೋಷ ಅಲ್ಲಿ ಜಯಘೋಷ ಇಲ್ಲಿ
ತುಂಬಿಹುದು ಸುತ್ತಮುತ್ತ
" ಆನೆಮಾತಿನಮೇಲೆ ಮಸಗಿದೆ ಸೊಳ್ಳೆಕೃತಿಯ ಸವಾರಿಯು "
ಕಾಮಾಲೆರೋಗ ; ಸರಿಯಿಲ್ಲ ಅವಗೆ ಚಿತ್ತ, ಪಿತ್ತ !
ದಯಮಾಡಿ ಬನ್ನಿ
ನಿಮಗಿರುವ ನೋಟ ತನ್ನಿ :
' ಕಿವಿತೆತ್ತು ಕೇಳಿ, ಇದು ನಮ್ಮ ಗತಿ,
ಸಾಧಿಸಿಹೆವಿಲ್ಲಿ ನಾಡ ಪ್ರಗತಿ !
ಬಿಗಿಹಿಡಿದು ಉಸುರ ಓಡಿದೆವು ನಾವು ಕಾಣದಿರ ನಮ್ಮ ಓಟ ? '
**(ಬತ್ತಿದ ಕೆರೆಯ ಹಿಂದಲ ತೋಟ !)**
' ಅವರಿವರು ಎಂಬ ನಂಟುತನ ನಮಗೆ ಇಲ್ಲ ;

ಸ್ವಾತಂತ್ರ್ಯ, ಸಮತೆ, ಸೋದರತೆ ನ್ಯಾಯ ಎಲ್ಲ
ಸರಿಸಮವು ನಿಮಗೆ; ಭೇದವಿಲ್ಲ–
ಸರ್ವಜನಕೆಲ್ಲ! '
" ಕಣ್ಣರಿಯದೊಡಂ ಕರುಳರಿಯದೆ ಮರುಗಿಸದಿರ್ಪುದೆ
ಭವಾಂತರ ವ್ಯಾಮೋಹಂ ? "
ಇದು ನಮ್ಮ ನೀತಿಧರ್ಮಂ
**" ಸತ್ಯಂ ಶಿವಂ ಸುಂದರಂ "**

*　　*　　*　　*

ನೊಂದಿದೆ ಮನ ಅದಕಿಲ್ಲವು ಶಾಂತಿಯದಿನ ;
ಶರಣು ಶರಣು ನಿನಗೆ ನಿತ್ಯನಿರಂಜನ !
ಕಡಿದುರುಳಿಸೋ ಈ ಭವಬಂಧನ ?

---

# ದೀಪಾವಳಿ

ದೀಪಾವಳಿ !......................
ಮನೆಮನೆಯಲಿ ಮಿರುಸೊಡರಿಸ ನರುಬೆಳಕಿನ ಹಾವಳಿ !
ಪ್ರತಿಮನಕೂ ಗತಕಾಲದ ನೆನಹಿನಧಾಳಿ !!

*           *           *           *

ಹರಿದೇಹದ ಬೆವರಿನ ಹಸಿ ಅಸುರಾಕೃತಿ ತಾಳಿ
ನರಲೋಕದ ಸುರಸುಂದರಿಯರು ಅದಕಾವುತಿ ' ಕೇsಳಿ '
ನರಕಾಸುರ,
ಪ್ರಾಗ್ಜ್ಯೋತಿಷ ಪುರ,
ಸಂಹರಿಸಿದ ಶ್ರೀಕೃಷ್ಣನ ಕರ
ಲಕಲಕಿಸಿತೆ ಬೆಂಬೆಳುಕಲಿ ಮಹsರಾತ್ರಿಯ ಕಗ್ಗತ್ತಲ ಸರ ?

ದೀಪಾವಳಿ !
ಶ್ರೀವಾಮನ ಮಹsಪಾದಕೆ ಶರಣಾದನು ಬಲಿ !
**ತ್ರೈಲೋಕ್ಯದ ವಿಜಯಿ ! ;**
' ನಾನೆ 'ಂಬುವ ಹೂಂಕಾರವೆ ಉರುಳಾಯಿತು ಅವಗೆ, ತಿಳಿ !!
(" ಆತ್ಮಾರ್ಥಂ ಕಿಂ ಯಾಚನೀಯಂ ಸರ್ವಂ ದತ್ತಂ ಮಯಾ ತಥಾ
ಲೋಕಾರ್ಥಂ ಯಾಚಯಿಷ್ಯಾಮಿ ಶಕ್ತಶ್ಚೇದ್ದೇಹಿ ತಚ್ಚಮೇ....")
ಕೇಳಿದ ಅವನು, ಎಲ್ಲವ ಕೊಟ್ಟವನು !
ಸರ್ವವ ತೊರೆದವನು !!

..........................................

(" ಬಲಿರಾಜ್ಯಂ ಸಮಾಸಾನ್ಯಯ್ಯೈರ್ನ ದೀಪಾವಲಿ : ಕೃತಾ
ತೇಷಾಂ ಗೃಹೇ ಕಥಂದೀಪಾ : ಪ್ರಜ್ವಲಿಷ್ಯಂತಿ ಕೇಶವ ! ")

‘ ಮುಂಬರಲಿಹ ಮೂರುದಿನ
ಬಲಿರಾಜ್ಯಕೆ ಅಧೀನ; ತಿಳಿಯಲಿ ಜನ,
ಮಹಲಕ್ಷ್ಮಿಯು ನಿಮಗೊಲಿವಳು, ಮಾಡಿರಿ ದೀಪದಾನ ’—
ಎನ್ನುತ ಬೇಡಿದ ಬಲಿಯು,
‘ ತಥಾಸ್ತು !’ ಎಂದನು ಹರಿಯು !

ಸಿರಿವಂತರ ಮನೆಮನೆಯಲಿ ವಿದ್ಯುತ್ತಿನ ದೀಪ
ಲಕಲಕಿಸಿವೆ ಗೊಂಚಲರೂಪ !
ಬಹುವರ್ಣದ ತಂಬೆಳಕಿನ ಚಾಪ !!
ಎಣ್ಣೆಯೆ ಇಲ್ಲದ ಕಡುಬಡವನ ಮನೆಯಲಿ
**ಕಗ್ಗತ್ತಲೆ ದೀಪ !**
ನೈವೇದ್ಯಕೆ ನೀರೂರಿಹ ದೈವಕೆ
**ಹಸಿದೊಟ್ಟೆಯು ಉಸುರೇ ಧೂಪ !!**

*   *   *   *

ಗತಕಾಲದ ಬಲಿ ಭೌಮಾಸುರರು
ಅಳಿಯದೆ ಅಳಿದೋಗಿಹರು—
ಕ್ಷಣಕಾಲದಿ ಚಿರಶಾಂತಿಯ ಕಲಕಿ
ಹರಿದೇವನ ಅವತಾರಕೆ ಕಾರಣರಾಗಿಹರು !
ಜನಮನದಲಿ ಅವರುಳಿದಿಹರು
ಬಲಿ ನರಕಾಸುರರು !

*   *   *   *

‘ ಎಂದೆಂದಿಗೂ ದುಡಿಯುವ ಶಿರವೇ ತಮ್ಮಧಿಕಾರಕೆ ಪ್ರೊಗರು ’
ಎನ್ನುವ ಜನರು ಇಂದಿನ ಬಲಿ ಭೌಮಾಸುರರು,
ಬಡವನ ಬೆವರಲಿ ಬದುಕಿಹ ಜನರು !

*   *   *   *

ಅಧಿಕಾರದ ಆಕ್ರಮಣದ ಶ್ರೀಮಂತರ ಅಡಿ
ಬೂಟಿನ ಹಿಮ್ಮಡಿ

ಹುಡಿಯಾಗಿದೆ–
ಶ್ರಮಜೀವಿಯ ಚೈತನ್ಯದ ನಾಡಿ
ಇನ್ನೇನಿದೆ? ಉಳಿದಿಹುದೊಂದೇ ಕಣ್ಣೀರಿನ ಕೋಡಿ!
..............................
ಅಲ್ಲ; ಧಗ ಧಗಿಸಲಿ ಕ್ರಾಂತಿಯಕಿಡಿ!!

* * * *

'ವಿಷ್ಣುಚಕ್ರ ಹಚ್ಚಿ ಸುರ್ ಸುರ್‌ಬತ್ತಿ ತನ್ನಿ!'
ಕತ್ತಲಲ್ಲಿ ಮಕ್ಕಳಾಟ, ಸಂತಸಕೂಟ;
ಕೈ ಹಿಡಿದರು ಸುಡದಿಹ ಬೆಂಕಿಯ ಆಟ!
ಆದರೆ?...............

..................................
ಹಿರೋಷಿಮಾ ನಾಗಸಾಕಿ....
ಅಲ್ಲ; ಇತ್ತೀಚಿನ ಜಪಾನಿನ ಬೆಸ್ತ
ಮುಂಬರಲಿಹ ನವಜೀವಕೆ
ನಮ್ಮೀ ನವಸಾಧನೆ ತೋರಿಹ ಸೀದಾರಾಸ್ತ!!
ಇದಕೆನ್ನುವರೆ ಮಾನವಕೋಟಿಯ ನಾಶ?
ಅಲ್ಲ; ಪರಿಹಾಸ!
'ಶಾಂತಿ' ಮಕ್ಕಳ ಪಟಾಕಿ ಆಟ!
ಅಣುಬಾಂಬಿನ ಸಿಡಿದಾಟ!
**'ಅಣುಬಾಂಬು ಹರಿಯ ಹನ್ನೊಂದನೆ ಅವತಾರ'**
ಹೌದೆ? ........ನಮಸ್ಕಾರ!
ಅಲೆಲೆಲೆ........ಎಂಥ ಚಮತ್ಕಾರ!?

# “ ಅವಳ ಕುಣಿತΣ ನೋಡಿ ! ”

“ ಅವಳ ಕುಣಿತΣ ನೋಡಿ ! ”
‘ ಅದುವೆ ಎಂಥΣ ನೋಡಿ ? ’

‘ ಒಂದೆ ಕಾಲಿನ ಗೆಜ್ಜೆ ಹಿಂದು–ಮುಂದಕು ಸರಿದು,
ನಡೆಸಿಹುದು ಶಬ್ದಗಳ ರಾಸಲೀಲೆ ! ’
“ ಕಣ್‌ಕುರುಡೆ ನಿನಗೇನು ? ಕುಣಿಯುವಳು ಅವಳಲ್ಲ,
ಬಂದಿಹುದು ಮೃತ್ಯುವಿನ ಕೆಂಪುಜ್ವಾಲೆ !! ”

‘ ತುಡಿವ ತಬಲದ ನಾದ, ಇಡುವ ಅಡಿಗಳ ನಿನದ
ಸಪ್ತಸ್ವರಗಳ ಜರಿದು ಜಿನುಗುತಿಹುದು. ’
“ ಅರಿತು ಮರೆತವ ನೀನು ! ‘ ಮರುಳ ’ ನಾಗುವೆಯಲ್ಲೋ
ಪ್ರಳಯಕಾಲದ ಕುಣಿತ ಅದುವೆ ನೋಡು ! ”

‘ ನನ್ನ ಮರೆತಿಹ ನನಗೆ ಬಂದಿಹುದು ಅರೆಹುಚ್ಚು,
ಸತ್ಯ ತಿಳಿದವ ನೀನು, ಬಾಯಿಮುಚ್ಚು ! ’
“ ಅನ್ನಕಾಣದ ದೇಹ ಕುಣಿದಿಹುದು ಅದಕಾಗಿ ;
ಹಸಿವು, ಸಂಕಟ, ನೋವು ಹೊಟ್ಟೆಗಾಗಿ ? ”

‘ ಸಣ್ಣನಡು, ಬಣ್ಣ–ತುಟಿ, ಉಬ್ಬಿದೆದೆ, ಕಪ್ಪನೆವೆ
ಚಲುವೆ ಚನ್ನಿಗೆ ಇರುವ ಅಮಲುಗಣ್ಣು ! .... ’
“ ಸಾಕು ಬಿಡು ಮಾರಾಯ ! ಹಾಕಿಬಿಡು ಹಿಡಿಕೂಳ
ನಿನ್ನ ವರ್ಣನೆಗಷ್ಟು ಹಾಳುಮಣ್ಣು !! ”

‘ ಅಗೋ ಅಲ್ಲಿ! ಕೇಳಲ್ಲಿ, ಹಾಡುತಿಹಳೇನನ್ನೋ ?
ಕೋಗಿಲೆಯ ದನಿಯಂತೆ ಅವಳ ಕೊರಳು. ’
“ ಕೋಟಿ ಕಂಠದವಾಣಿ, ದಾಟುತಿದೆ ಗಡಿ ಸೀಮೆ
ಹಸಿದವರ ಪರವಾಗಿ ಹಾಡುತಿಹಳು ! ”

‘ ಬರುವುದಿಲ್ಲವೆ ಗೆಳೆಯ ? ಪ್ರಜರಾಜ್ಯ ಉದಯ !
ಮಂತ್ರಿಗಳ ಭಾಷಣವು ಇರುವುದಂತೆ. ’
“ ಸಾಯುತಿಹಳಯ್ಯೋ, ಹಾ ! ಅನ್ನವಿಲ್ಲದ ಬಡವಿ
ನಿನ್ನ ಸಿರಿತನ ಸುಡಲಿ, ಹಾಕುಮುಂಚಿ ! ”

‘ ಆರು ಮುವ್ವತ್ತಕ್ಕೆ ಭಾಷಣವು ಇಹುದಂತೆ
ದೊಡ್ಡ ದೊಡ್ಡವರೆಲ್ಲ ಬರುವರಂತೆ !
ನಮ್ಮ ದೇಶದಲೆಲ್ಲಾ ಹಬ್ಬ ಆಚರಿಸಾಗ
ನಮಗೇಕೆ ಇಂಥವರ ಹುಚ್ಚುಚಿಂತೆ ? ’

* * * *

ಸಿಟ್ಟಗೆದ್ದನು ಅವನು ಕಣ್ಣ ಕಿಡಿಕಾರುತ್ತ,
ದಡಬಡನೆ ನಡೆದೆದ್ದ,
ಸಿಲ್ಕಿನಂಗಿಯಮೇಲೆ ಕೈಯಾಡಿಸುತ್ತ ;
ತೊಟ್ಟ ತೆಳುವಿನ ಪಂಚೆ ತೂರಾಡುತಿತ್ತು,
ತೊನೆವ ತಂಗಾಳಿಯಲಿ ತಲೆಯ ‘ ಸೌರಭ ’ ವೆಲ್ಲ ಪ್ರಸರಿಸಿತ್ತು !
ಮಂತ್ರಿಗಳ ಭಾಷಣಕೆ ಮಲಗಿದ್ದ ಹೆದ್ದಾರಿ
ಬೂಟುಗಾಲಿನ ಅವನ ಕರೆದೊಯ್ಯುತಿತ್ತು !
..............................................
ಅವಳ ಕುಳಿತೆಡ ನೋಡು !
ಅದುವೆ ಎಂಥೆಡ ಪಾಡು ?

## ಹರಸುವೆನು, ಓ, ಗೆಳೆಯ !

ಹರಸುವೆನು, ಓ, ಗೆಳೆಯ ನಿನ್ನನೀ ದಿನದಂದು ;
ದಿವ್ಯಗಳಿಗೆಯ ಶುಭ ಮುಹೂರ್ತದಲ್ಲಿ !
ಬಾಳ ಬೃಂದಾವನದಿ ನಡೆಯಲಿಹ ನಿನಗಿಂದು
ಸುಖ ಶಾಂತಿ ದೊರೆತಿರಲಿ ; ಜೊನ್ನ ರಸ ಚೆಲ್ಲಿ !!
ಕೈ ಹಿಡಿಯಲಿಹ ಗೆಳತಿ,
ನಿನ್ನ ಒಲವಿನ ಪ್ರಣತಿ !
ಬೆಳಕ ಚೆಲ್ಲಲಿ ತಾನೆ ತಿಳಿ ಬೆಳುದಿಂಗಳಾಗಿ ;
ನಲವು–ನೋವುಗಳಲ್ಲಿ ಸಮಭಾಗಿಯಾಗಿ ;
ಒಲಿದು ನಡೆಯಿರಿ ನೀವು ಸತ್ಯ ಪಥವನೆ ಹಿಡಿದು ;
ಕನಸ ಕಲ್ಪದ್ರುಮವ ನನಸಾಗಿ ಪಡೆದು !!
....ಬರಲಿರುವ ಬಾಳಿನಲಿ ನೂರಾರು ಕಷ್ಟಗಳು ;–
ಸುಖವೊಂದನೇ ನೆಚ್ಚಿ ಮುಂದರಿಯಬೇಡ !
ಎದೆಯ ನಡುಗಿಸುವಂಥ ಘಟನೆಗಳ ಜಡಿಮಳೆಯೆ
ಸುರಿದರೂ, ಹೆದರಿಕೆಗೆ ಸೆರೆಯಾಗಬೇಡ !!
ಇದು ನನ್ನ ಹಿರಿ ಬಯಕೆ
ಹೃತ್ಕಮಲದರಕೆ !
ನಾನೇನ ಕೊಡಬಲ್ಲೆ ? –ಲೇಖನಿಯು ಕೈಯ್ಯವನು !
ಸಲ್ಲಿಸುವೆ ನಿಮಗಿಂದು ಬಡನುಡಿಯ ಕವಿತೆಯನು—
ಬಂಗಾರ, ಬೆಳ್ಳಿಗದುತಾನೆ ಹಿರಿದಲ್ಲ ! ? ....
**“ ಸುಖದ ನಂದನವನವೆ ನಿಮಗಿರಲಿ ; ಎಲ್ಲ.”**
ನೆನಪಿರಲಿ : **“ ಜೀವನವು ತಾ ಬೇವು–ಬೆಲ್ಲ !! ”**

# ಮಧುರ ಯಾನ

ಬಾಳ ಸಾಗರದಲ್ಲಿ ಸಾಗಲು ಕಾದು ನಿಂತಿದೆ ಜೀವನ
ನೋವು ನಲವಿನ ಅಲೆಗಳೆ ಭೋರ್ಗರೆದು ನಿಂತಿವೆ ಈ ದಿನ.
ಗುರಿಯ ಸೇರುವ ಹಿರಿಯಬಯಕೆಯೆ, ಗರಿಯ ತಾಳಿದೆ ಚೇತನ !
ಒಲುಮೆ ಬೆಂಬಲ ನೀಡಿ ಕರೆದಿದೆ ಮಧುರಪ್ರೇಮದ ಬಂಧನ !!

ಹಸುಗಳೆಗನಸಿನ ಶಿಶಿರಲೋಕಕೆ ನಮ್ಮಬಯಕೆಯ ಪಯಣವು
ಮಳೆಯಬಿಲ್ಲಿನ ಸಿರಿಯಚಲುವಿಗೆ ಮನವೆಸೋತಿದೆ ; ಮೌನವು !
ಮಧುರ ಭಾವದ ದಿವ್ಯರೂಪದ ಪ್ರೀತಿ ಪ್ರೇಮದ ಸ್ರೋತವು.
ನೂರು ವರ್ಣದ ನೂರು ರಾಗದ ಮಧುರಯಾನದ ಬಯಕೆಯು !

## ಈ ಲೇಖಕರ ಇತರ ಕೃತಿಗಳು

---

ಗೌರಮ್ಮನ ಪದಗಳು, (ಜನಪದ ಗೀತೆಗಳ ಸಂಗ್ರಹ)

ರುದ್ರ ಭೂಮಿಯಲ್ಲಿ (ಅಚ್ಚಿನಲ್ಲಿ)
(ಕಥಾಸಂಕಲನ)

ಬೆಳ್ಳಿಮೂಡಿತು (ಬರಲಿದೆ)
(ಕಾದಂಬರಿ)

## ನಮ್ಮ ಮೊದಲ ಪ್ರಕಟಣೆ :—

### ನನ್ನ ಮನೆಗೆ ನೀ ಚಂದ
(ಕಥಾಸಂಕಲನ)

**ಲೇಖಕ: ಶ್ರೀ ಪಂಚ**

ಕೆಲವು ಅಭಿಪ್ರಾಯಗಳು :—

"....ನನ್ನ ಮನೆಗೆ ನೀ ಚಂದ" ಎನ್ನುವುದು ಬಹು ನಾವೀನ್ಯ ಪೂರ್ಣವಾದ ಹೆಸರು ಈ ಪುಸ್ತಕದ ಮಾತು, ಶೈಲಿ, ಎಲ್ಲವೂ ಕನ್ನಡಕ್ಕೆ ಹೊಸದು. ಬರುವ ಸನ್ನಿವೇಶ, ನಡೆದ ಪ್ರಸಂಗ, ಹೇಳುವ ರೀತಿ, ಎಲ್ಲವೂ ನಾವೀನ್ಯ ಪೂರ್ಣವಾಗಿವೆ. ಪುಸ್ತಕದ ಹೆಸರನ್ನೇ ಎತ್ತಿಕೊಂಡು ತಿರುಗಿ ಹೇಳುವುದಾದರೆ 'ಕನ್ನಡದ ಮನೆಗೆ ನೀ ಚಂದ' ಎಂದು ಹೇಳಬಹುದು...."

—**ಪ್ರಪಂಚ.**

"........ಈ ಸಂಕಲನದಲ್ಲಿ ಒಟ್ಟು ಏಳು ಕಥೆಗಳಿವೆ. ಕಥೆಗಳ ವಸ್ತು ನೇರವಾಗಿ ಜನಪದದ ಬಾಳಿನಿಂದ ಎತ್ತಿಕೊಂಡವಾಗಿವೆ. ಕೊನೆಯವರೆಗೂ ಓದುಗರ ಮನಸ್ಸನ್ನು ಆಕರ್ಷಿಸುವ ಕಲಾಪೂರ್ಣವಾದ ಸರಳ ಶೈಲಿ, ಸೊಗಸಾದ ಕೆಲವೇ ನುಡಿಗಳಲ್ಲಿ ವ್ಯಕ್ತಿತ್ವ ನಿಲ್ಲಿಸುವ ಹದ, ಇವು ಇವರ ಬರಹದ ಮುಖ್ಯ ಲಕ್ಷಣಗಳು ಎಂದು ಹೇಳಬಹುದು........ಈ ಎಲ್ಲ ಕಥೆಗಳೂ ನೊಂದವರ ಬಾಳನ್ನು ಕುರಿತು ಚಿಂತಿಸಿದ ಫಲವಾಗಿ ಮೂಡಿಬಂದವಾಗಿವೆ. ಹಾಗೆಯೆ ಇವುಗಳನ್ನು ಓದಿ ಮುಗಿಸಿದ ಮೇಲೆ ಶೆಲ್ಲಿ ಕವಿಯ 'our sweetest songs are those that tell of saddest thoughts' ಎನ್ನುವ ಮಾತು ನೆನಪಾಗದಿರದು—"

—**ಪ್ರಬುದ್ಧ ಕರ್ಣಾಟಕ.**

"........ಮಕ್ಕಳ ಬಗೆಗೆ ಮಮತೆ-ಕರುಣೆಗಳು ತಂದೆ-ತಾಯಿಗಳೀರ್ವರಲ್ಲೂ ಸಾಕಷ್ಟೇ ಉಂಟೆಂಬ ಸಿದ್ಧಾಂತವನ್ನು ಅಲ್ಲಗಳೆಯಲಾಗದು-ಎಂಬ ಅಂಶ ಶ್ರೀಪಂಚರ ಕಥೆಗಳಲ್ಲಿ ದೊರೆಯದಿಂದು........ಒಟ್ಟಿನಲ್ಲಿ ಇವರದು ನೈಜ ಸಾಹಸ. ಸಾಹಿತ್ಯ ಲಕ್ಷಣ ಇವರ ಲೇಖನಿಗಿದೆ...."

—**ಪ್ರಜಾವಾಣಿ.**

"........ಶ್ರಿಪಂಚರ ಕಥೆಗಳಲ್ಲಿ ವಾಸ್ತವತೆಗೆ ಹೆಚ್ಚು ಪ್ರಾಶಸ್ತ್ಯ ದೊರೆತಿದೆ. ಅವರು ತಮ್ಮ ಸುತ್ತಲಿನ ನೋಟವನ್ನೇ ಒಳ್ಳೆ ಮಾರ್ಮಿಕ ಕೃತಿಗಳನ್ನಾಗಿ ಇಲ್ಲಿ ಚಿತ್ರಿಸಿ ಹೆಚ್ಚು ಸಾಫಲ್ಯವನ್ನು ಹೊಂದಿದ್ದಾರೆ...."

—ಜನಪ್ರಗತಿ.

"........ಶ್ರೀಪಂಚರಿಗೆ ಜೀವನವನ್ನು ನೋಡುವ ದೃಷ್ಟಿ ಇದೆ; ಸರಳ ಸುಂದರವಾದ ಶೈಲಿ ಇದೆ ಇನ್ನೂ ಒಳ್ಳೆಯ ಕಥೆಗಳನ್ನು ಕೊಡಬಲ್ಲರೆಂದು ಧಾರಾಳವಾಗಿ ಹೇಳುವಂತೆ ಈ ಸಂಕಲನ ತೃಪ್ತಿಕರವಾಗಿದೆ...."

—ಚಿತ್ರಗುಪ್ತ

"....ಇಲ್ಲಿರುವ ಏಳು ಕಥೆಗಳೂ ಮುನ್ನುಡಿಕಾರ ಶ್ರೀ ನಿರಂಜನರು ಹೇಳುವಂತೆ: 'ನಿರ್ಮಲಾಂತಃಕರಣವೊಂದು ನೀಡಿರುವ ರಸಪಾಕ'....ಆದರ್ಶವಾದಿಯ ದೃಷ್ಟಿಯಿಂದ ಸರಳ ಸುಂದರ ಭಾಷೆಯಲ್ಲಿ ರೂಪಿತವಾಗಿವೆ ಈ ಚಿತ್ರಗಳು ಉತ್ತಮ ಭವಿಷ್ಯದ ಬೀಜವನ್ನು ಅಡಗಿಸಿರುವ ಈ ಬರಹಗಳು ಆಶಾದಾಯಕವಾಗಿವೆ...."

—ಕತೆಗಾರ

"........Sripancha has equal insight into private lives and the working of social organisations. He reveals sympathetic understanding of people whose primary affections are cruelly frustrated and some times miraculously fulfilled........He has genuine poetic feeling and a real ability to build up atmosphere. He commands a simple and suggestive language and has a fine talent for description and dialogue........"

----DECCAN HERALD.

# ದೇವಿರಾ ಮಂದಿರದ ಪ್ರಕಟಣೆ.

## ನನ್ನ ಮನೆಗೆ ನೀ ಚಂದ

(ಕಥಾ ಸಂಕಲನ)

ಲೇಖಕ: ಶ್ರೀಪಂಚ ಬೆಲೆ: ೧—೦—೦

## ಮುಂದಿನ ಪ್ರಕಟಣೆಗಳು:

### ಸಮಾಗಮ

(ಕ. ಮ. ಶಿ. ಚಂದ್ರಶೇಖರಯ್ಯ—ಸಿ. ಬಿ. ಚಂದ್ರಶೇಖರ್—ಶ್ರಿಪಂಚ—ಬಿ. ಜಯದೇವ—ಇವರ ಕಥಾ ಸಂಕಲನ)

ಸಂಪಾದಕ: ಶ್ರೀಪಂಚ

### ರುದ್ರ ಭೂಮಿಯಲ್ಲಿ

(ಕಥಾ ಸಂಕಲನ)

ಲೇಖಕ: ಕ. ಮ. ಶಿ. ಚಂದ್ರಶೇಖರಯ್ಯ.

... ದೊರೆಯುವ ಸ್ಥಳ:

...ಶಾಲಯ

... ಅರಳೇಪೇಟೆ ಬೆಂಗಳೂರು.



........"ಈ ಸಂಗ್ರಹದ ಅನೇಕ ಕವಿತೆಗಳಲ್ಲಿ ಕವಿಯ ಮುಗ್ಧ ಮನೋಭಾವ ಮಧುರ ಕಲ್ಪನೆಯೊಡನೆ ವ್ಯಕ್ತಗೊಂಡಿರುವುದನ್ನು ಕಾಣುತ್ತೇವೆ.

"ಹಸುಳೆಗನಸಿನ ಶಿಶಿರಲೋಕಕೆ ನಮ್ಮ ಬಯಕೆಯ ಪಯಣವು
ಮಳೆಯ ಬಿಲ್ಲಿನ ಸಿರಿಯ ಚೆಲುವಿಗೆ ಮನವೆ ಸೋತಿದೆ–ಮೌನವು !
ಮಧುರಭಾವದ ದಿವ್ಯರೂಪದ ಪ್ರೀತಿ ಪ್ರೇಮದ ಸ್ರೋತವು
ನೂರು ವರ್ಷದ ನೂರು ರಾಗದ ಮಧುರಯಾನದ ಬಯಕೆಯು."

ಕಾವ್ಯರಚನೆಗೆ ತೊಡಗುವ ಪ್ರಥಮದಲ್ಲಿ ಕವಿಗೆ ಇಂಥ ಭಾವ ಸಹಜವಾದದ್ದು. ಕಾವ್ಯಜೀವನದ ಸೊಗ್ಗು "ಅರಳಿ ಸೌರಭವೀವ ಸಂತಸಕೆ ಕಾದಿಹುದು," "ಜನರ ಮನವನು ಸೆಳೆವ ಮರುಳಾಟ ಇದಕಿಹುದು"........ವೈಯಕ್ತಿಕ ನೋವು ನಲಿವುಗಳಲ್ಲದೆ ಸಾಮಾಜಿಕ ವಸ್ತುವನ್ನು ಕವಿತೆಗೆ ಅಳವಡಿಸಿಕೊಂಡಾಗಲೂ ಇವರ ಕವಿತಾಶಕ್ತಿ ಕುಂಠಿತವಾಗಿಲ್ಲದಿರುವುದು ಗಮನಾರ್ಹವಾಗಿದೆ......................

........ಚಂದ್ರಶೇಖರಯ್ಯನವರ ಭವಿಷ್ಯದಲ್ಲಿ ನಿಜವಾಗಿಯೂ ನಾನು ಭರವಸೆಯನ್ನು ತಾಳಿದ್ದೇನೆ......................................."

( ಚನ್ನವೀರ ಕಣವಿಯವರ 'ನೇಹದ ನುಡಿ'ಯಿಂದ)